ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ, ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ

# ಗೊಮ್ಮಟವಾಣಿ

44ನೇ ವರ್ಷದ ಪ್ರಕಾಶನದಲ್ಲಿ

ಅಂತಿಮ ಶ್ರುತಕೇವಲಿ ಶ್ರೀ ಭದ್ರಬಾಹು ಚರಣ

ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ದಿನಾಂಕ : 15.09.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ವೀರಸಂವತ್ : 2549 ಪುಟಗಳು : 6

ಸಂಪುಟ : 17 ಸಂಚಿಕೆ : 18 ಸೋಪಾನ : 1045 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23


**ಜಿನಭಾಷಿತ**

ಧಮ್ಮೇಣ ಕುಲಪಸೂಈ ಧಮ್ಮೇಣ ಯ
ದಿವ್ವರೂವಸಂಪತ್ತೀ ।
ಧಮ್ಮೇಣ ಧಣಪಮಿದ್ಧೀ ಧಮ್ಮೇಣ
ಸುವಿತ್ಥಡಾ ಕಿತ್ತಿ ॥ ಸಮರಾಇಚ್ಚಕಹಾ, ಪ್ರಥಮಭವ–12

ಧರ್ಮದಿಂದ ಉತ್ತಮ ಕುಲ, ದಿವ್ಯರೂಪ, ಧನ ಹೆಚ್ಚುತ್ತದೆ ಮತ್ತು ಧರ್ಮದಿಂದ ಒಳ್ಳೆಯ ಕೀರ್ತಿಯು ಹರಡುತ್ತದೆ.

## ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ :

ದರ್ಶನದ ಸಮಯ
ಬೆಳಗ್ಗೆ 6–30 ರಿಂದ ಸಂಜೆ 6–00ರವರೆಗೆ

ಪೂಜಾ ಸಮಯ
ಬೆಳಗ್ಗೆ 8–00 ರಿಂದ ಬೆಳಗ್ಗೆ 10–00ರವರೆಗೆ

ದೂರವಾಣಿ : 9008954636

: ಶ್ರೀಮಠ :

ದರ್ಶನ ಸಮಯ
ಬೆಳಗ್ಗೆ 6–30 ರಿಂದ ರಾತ್ರಿ 8–00ರವರೆಗೆ

ಪೂಜಾ ಸಮಯ
ಬೆಳಗ್ಗೆ 7–00 ರಿಂದ ಬೆಳಗ್ಗೆ 9–00ರವರೆಗೆ

ದೂರವಾಣಿ : 9844143722

: ಸ್ವಾಮೀಜಿಯವರ ಕಛೇರಿ :
ದೂರವಾಣಿ : 9380771024

: ಶ್ರೀಮಠದ ಕಛೇರಿ :
ದೂರವಾಣಿ : 8431560480

: ವಸತಿ ವಿಭಾಗ ಕಛೇರಿ:
ದೂರವಾಣಿ : 9353667645

ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ ನಿಮ್ಮ ಮನೆಗೆ ತಲುಪುತ್ತಿಲ್ಲವೇ....?
ಸಂಪರ್ಕಿಸಿ : 8660118443
ವಾರ್ಷಿಕ ಚಂದಾ : ರೂ. 250–00
ಆಜೀವ ಸದಸ್ಯತ್ವ : ರೂ. 2,500–00

ಶ್ರೀಕ್ಷೇತ್ರಕ್ಕೆ ಆಹಾರ, ಔಷದ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು

Paytm G Pay PhonePe

## ಭವ್ಯ ಜೈನೇಶ್ವರಿ ದೀಕ್ಷಾ ಮಹೋತ್ಸವ






ಶ್ರವಣಬೆಳಗೊಳ ಆ. 29 : ಸಾವಿರಾರು ವರ್ಷಗಳಿಂದಲೂ ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಮುನಿದೀಕ್ಷೆ ಪಡೆದು, ಸಂಯಮ ಪಾಲಿಸಿ, ವಿಹಾರ ಮಾಡಿದಂತ ಪುಣ್ಯಕ್ಷೇತ್ರ. ಇಂತಹ ಕ್ಷೇತ್ರದ ಚಾವುಂಡರಾಯ ಸಭಾ ಮಂಟಪದಲ್ಲಿ ಮಂಗಳವಾರ ಭವ್ಯ ಜೈನೇಶ್ವರಿ ದೀಕ್ಷಾ ಮಹೋತ್ಸವ ಕಾರ್ಯಕ್ರಮ ನಡೆಯಿತು. ಯುಗಲ ಮುನಿ ಮಹಾರಾಜರು ಆಶೀರ್ವಚನ ನೀಡುತ್ತಾ, ದೀಕ್ಷೆಯು ಮೋಕ್ಷ ಮಾರ್ಗಕ್ಕೆ ಕಾರಣವಾಗುತ್ತದೆ. ಮುನಿ ದೀಕ್ಷೆಯು ಮಹಾ ಸಂಯಾಮವಾದರೆ, ಕ್ಷುಲ್ಲಕ ದೀಕ್ಷೆಯು ಲಘು ಸಂಯಮವಾಗಿರುತ್ತದೆ ಎಂದು ತಿಳಿಸಿದರು.

ದೀಕ್ಷಾ ಕಾರ್ಯಕ್ರಮಕ್ಕೂ ಮೊದಲು ದೀಕ್ಷಾರ್ಥಿಗಳನ್ನು ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು. ಪರಮಪೂಜ್ಯ ಸಮಸ್ತ ಸಾಧು ವೃಂದದ ಸಾನಿಧ್ಯದಲ್ಲಿ ತೀರ್ಥಂಕರರಿಗೆ ಅಭಿಷೇಕ, ಪೂಜೆ ನೆರವೇರಿಸಲಾಯಿತು. ನಂತರ ದಿಕ್ಷಾರ್ಥಿಗಳು ದೀಕ್ಷಾ ಗುರುವಿನ ಬಳಿ ನಿವೇದನೆ ಅರ್ಪಿಸಿದರು. ಸಮಾಜ ಮತ್ತು ಪರಿವಾರದವರ ಅನುಮೋದನೆಯಂತೆ ದೀಕ್ಷಾ ಗುರುಗಳಾದ ಪ.ಪೂ. 108 ಯುಗಲ ಮುನಿಗಳು ಬ್ರ. ಪದ್ಮಾವತಿ ದೀದಿಗೆ ಹಾಗೂ ಪೂಜ್ಯ ಗಣನೀ ಆರ್ಯಿಕ ವಿಶಿಷ್ಟಮತಿ ಮಾತಾಜಿಯವರು ಬ್ರ. ವಿಮಲಾ ದೀದಿಯವರಿಗೆ ದೀಕ್ಷಾ ವಿಧಿಯನ್ನು ಬೋದಿಸಿ, ಕ್ಷುಲ್ಲಿಕ ಸುಪದ್ಮಶ್ರೀ ಮಾತಾಜಿ ಹಾಗೂ ಕ್ಷುಲ್ಲಿಕ ವಿರತಮತಿ ಮಾತಾಜಿ ಎಂದು ನಾಮಕರಣ ಮಾಡಿದರು.

ಭಾನುವಾರ ಸಂಜೆ ಮೆಹಂದಿ ಕಾರ್ಯಕ್ರಮ, 28–08–2023ರ ಸೋಮವಾರ ಬೆಳಗ್ಗೆ ಚಂದ್ರಗಿರಿ ಚಿಕ್ಕಬೆಟ್ಟದ ಭದ್ರಬಾಹು ಚರಣಗಳಿಗೆ ವಿಶೇಷ ಪೂಜೆ, ಮದ್ಯಾಹ್ನ ಗಣಧರವಲಯ ಆರಾಧನೆ ನೆರವೇರಿಸಲಾಯಿತು. ಸಂಜೆ ದೀಕ್ಷಾರ್ಥಿಗಳಿಗೆ ಉಡಿ ತುಂಬಿ ಬೆಳ್ಳಿರಥದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕ್ಷೇತ್ರದಲ್ಲಿ ಚಾತುರ್ಮಾಸ ನಿರತ ಹದಿನಾಲ್ಕು ಸಾಧುಗಳು ಸಾನ್ನಿಧ್ಯ ವಹಿಸಿದ್ದರು.

## ಕರ್ಮಯೋಗಿ ಚಾರುಶ್ರೀ ತೋಟ ಲೋಕಾರ್ಪಣೆ






ಶ್ರವಣಬೆಳಗೊಳ ಆ. 30 : ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಆಶಯದಂತೆ ಕಲ್ಪವೃಕ್ಷಗಳಾದ ತೆಂಗು ಮತ್ತು ಮಾವಿನ ಮರಗಳನ್ನು ಬೆಳೆಸಿ, ಅದರ ಫಲವನ್ನು ಕ್ಷೇತ್ರದಲ್ಲಿ ವಾಸ್ತವ್ಯವಿರುವ ಸಾಧುಗಳಿಗೆ, ಶ್ರೀಮಠದ ಜಿನಾಲಯಗಳ ಪೂಜೆಗೆ ಬಳಕೆ ಮಾಡಲಾಗುವುದು ಹಾಗೂ ಈ ತೋಟದಲ್ಲಿ ಬಂದ ಎಳನೀರನ್ನು 2030ರ ಭ. ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕಕ್ಕೆ ಉಪಯೋಗಿಸಲಾಗುವುದು ಮತ್ತು ಇದು 2030ರ ಮಹಾಮಸ್ತಕಾಭಿಷೇಕದ ಪೂರ್ವಸಿದ್ಧತೆ ಎಂದು ಶ್ರೀಜೈನ ಮಠದ ಪೀಠಾಧ್ಯಕ್ಷರಾದ ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಹೇಳಿದರು. ಈ ಸಂದರ್ಭದಲ್ಲಿ ತೋಟವನ್ನು ತಯಾರು ಮಾಡಿದ ದಾನಿಗಳಾದ ತುಮಕೂರಿನ ಕೆಇಬಿ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ ಎನ್.ಬಿ.ಶ್ರೇಯಾಂಸಕುಮಾರ್ ಹಾಗೂ ಜಿ.ಎಸ್.ರಾಜೇಂದ್ರ ಕುಮಾರ್‌ರವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸುಂಡಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ, ಜುಟ್ಟನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ, ಶ್ರವಣಬೆಳಗೊಳ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಯಶೋಧ ಲೋಕೇಶ್, ಡಾ. ಬಿ.ಆರ್.ಯುವರಾಜ್, ಪರಿಸರ ಪ್ರೇಮಿ ಬೆಕ್ಕ ರಾಘವೇಂದ್ರ, ಬಾಹುಬಲಿ ಮಕ್ಕಳ ಆಸ್ಪತ್ರೆ ಆಡಳಿತ ಸಮಿತಿ ಅಧ್ಯಕ್ಷ ಡಾ. ರತ್ನರಾಜು, ದಿಗಂಬರ ಜೈನ ಸಮಾಜದ ಅಧ್ಯಕ್ಷ ಜಿ.ಪಿ.ಪದ್ಮಕುಮಾರ್, ಎಸ್.ಡಿ.ಜೆ.ಎಂ.ಐ.ಎಂ.ಸಿ. ಟ್ರಸ್ಟ್ ಸದಸ್ಯರಾದ ಜಿ.ಬಿ.ದೇವೇಂದ್ರಕುಮಾರ್, ಎಸ್.ಎಸ್. ಪೌದನ್, ಕೂಷ್ಮಾಂಡಿನಿ ಮಹಿಳಾ ಸಮಾಜದ ಉಪಾಧ್ಯಕ್ಷೆ ತಿಲಕ ನವೀನ್ ಮುಂತಾದವರಿದ್ದರು.

## ಚಾರುಶ್ರೀ ವಾಣಿ



ಎಲ್ಲ ಮತ, ಪಂಥಗಳ ತತ್ವವೇ ಅಹಿಂಸೆ. ಅಹಿಂಸೆಗೆ ಪೂರಕವಾಗಿ ಸತ್ಯ, ಅಚೌರ್ಯ, ಅಪರಿಗ್ರಹ, ಬ್ರಹ್ಮಚರ್ಯಗಳು ಇವೆ. ಅಹಿಂಸೆಯಿಂದಲೇ ವಿಶ್ವಶಾಂತಿ ನೆಲೆಗೊಳ್ಳಲು ಸಾಧ್ಯ.

– ಸ್ವಸ್ತಿಶ್ರೀ ಕರ್ಮಯೋಗಿ
ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

## ಅಭಿನವ ಚಾರುಶ್ರೀ ನುಡಿ



### ಆತ್ಮ ಕಲ್ಯಾಣಕ್ಕೆ ದಶಲಕ್ಷಣ

ಜಗತ್ತಿನಲ್ಲಿನ ಪ್ರತಿಯೊಂದು ಆತ್ಮವು ತನ್ನ ಕಲ್ಯಾಣಕ್ಕಾಗಿ ಪ್ರಯತ್ನ ಶೀಲವಾಗಿರುತ್ತವೆ. ಅದಕ್ಕಾಗಿ ಹಲವಾರು ಜನ್ಮವೆತ್ತಿ, ಕರ್ಮಗಳನ್ನು ನಾಶ ಮಾಡಿಕೊಂಡು ಮೋಕ್ಷವನ್ನು ಪಡೆಯಲು ಬಯಸುತ್ತವೆ. ನಾವು ಜಗತ್ತಿನ ಶಾಂತಿಯನ್ನು ಬಯಸಿ, ಭಗವಂತನ ಆರಾಧನೆ ಮಾಡಿ ಶಾಂತಿಯನ್ನು ಪಡೆಯಬಹುದು. ಅಂತಹ ಭಗವಂತನು ಸಹ ತನ್ನ ಆತ್ಮನ ಕಲ್ಯಾಣ ಮಾಡಿಕೊಳ್ಳಲು, ಆತ್ಮನನ್ನು ಪರಮಾತ್ಮನನ್ನಾಗಿಸಲು, ಮೋಕ್ಷವನ್ನು ಸಾಧಿಸಲು ಅನುಸರಿಸಿದ ಮಾರ್ಗಗಳಲ್ಲಿ ಒಂದು ಉತ್ತಮವಾದ ಧರ್ಮದ ಹತ್ತು ಲಕ್ಷಣಗಳ ಆರಾಧನೆ. ಅದೇ ದಶಲಕ್ಷಣ ಪರ್ವ.

ಈ ಹತ್ತು ದರ್ಮದ ಲಕ್ಷಣಗಳು ಸರ್ವಾತ್ಮಗಳನ್ನು ಪರಮಾತ್ಮನನ್ನಾಗಿಸುವ ಮಾರ್ಗವನ್ನು ತಿಳಿಸುತ್ತವೆ. ಆತ್ಮನಲ್ಲಿನ ದೋಷಗಳನ್ನು ಕಳಚಿ, ಆತ್ಮನ ಗುಣಗಳನ್ನು ಬೆಳಗಿಸುತ್ತವೆ.

ಈ ದಶಲಕ್ಷಣ ಪರ್ವವು ಆತ್ಮನನ್ನು ವೈರಾಗ್ಯದ ಕಡೆಗೆ ಕೊಂಡೊಯ್ಯುವ ಪರ್ವವಾಗಿದೆ. ನಮ್ಮ ಆತ್ಮ ನ ಭಾವನೆಗಳನ್ನು ಶುದ್ಧೀಕರಿಸಿ ಪರಿಶುದ್ಧಾತ್ಮನನ್ನಾಗಿಸುವ ಆಧ್ಯಾತ್ಮ ಪರ್ವವಾಗಿದೆ. ವಿಕಾರಿ ಭಾವಗಳನ್ನು ತ್ಯಜಿಸಿ ಮಾನವೀಯ ಮೌಲ್ಯಗಳನ್ನು ಹೊಂದಿರುವ, ಉದಾತ್ತವಾದ ಭಾವನೆಗಳನ್ನು ಸ್ವೀಕರಿಸುವ ಪರ್ವವಾಗಿದೆ.


ಆತ್ಮನಲ್ಲಿನ ಕ್ರೋಧಾದಿ ನಾಲ್ಕು ರೀತಿಯ ಕಷಾಯಗಳನ್ನು ತ್ಯಜಿಸುವುದು. ಇಂದ್ರಿಯಗಳನ್ನು ನಿಗ್ರಹಿಸುವುದು, ದಾನ–ಧರ್ಮಗಳನ್ನು ಮಾಡುವುದು, ಪರಿಗ್ರಹಗಳನ್ನು ತೊರೆಯುವುದು, ಆ ಮೂಲಕ ಆತ್ಮನನ್ನು ಪರಮಾತ್ಮನನ್ನಾಗಿಸುವ ಶ್ರೇಷ್ಠ ಮಾರ್ಗವಾಗಿದೆ ಈ ಧರ್ಮದ ದಶಲಕ್ಷಣಗಳ ಮಾರ್ಗ.

ಇಂತಹ ಶ್ರೇಷ್ಠವಾದ ಹತ್ತು ಲಕ್ಷಣಗಳನ್ನು ಆತ್ಮನಲ್ಲಿ ಅಳವಡಿಸಿಕೊಂಡು ನಡೆದಾಗ, ಈ ಉತ್ತಮವಾದ ಲಕ್ಷಣಗಳು ಶ್ರೇಷ್ಠ ಧರ್ಮಕ್ಕೆ ಕಾರಣವಾಗುತ್ತದೆ. ಇವುಗಳು ಆತ್ಮನ ವಿಕಾಸಕ್ಕೆ ಮಾರ್ಗದರ್ಶಿಯಾಗುತ್ತದೆ. ಬರುವ ಭಾದ್ರಪದ ಮಾಸದಲ್ಲಿ ನಾವೆಲ್ಲರೂ ಆತ್ಮಕಲ್ಯಾಣದ ಹಾದಿಯಲ್ಲಿ ಸಾಗಿ, ಆತ್ಮನನ್ನು ಪವಿತ್ರಗೊಳಿಸಿ, ಮೋಕ್ಷದ ಹಾದಿಯಲ್ಲಿ ಸಾಗೋಣ.

– ಜಗದ್ಗುರು ಸ್ವಸ್ತಿಶ್ರೀ ಅಭಿನವ
ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

## ರಾಜ್ಯಸಭಾ ಸದಸ್ಯ ಲೆಹರ್‌ಸಿಂಗ್‌ರವರ ಭೇಟಿ

ಶ್ರವಣಬೆಳಗೊಳ. ಸೆ. 2 : ರಾಜ್ಯಸಭಾ ಸದಸ್ಯರಾದ ಲೆಹರ್‌ಸಿಂಗ್‌ರವರು ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಪ.ಪೂ. ಸ್ವಾಮೀಜಿಯವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಶ್ರೀಕ್ಷೇತ್ರ ಶ್ರವಣಬೆಳಗೊಳದ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಒದಗಿಸುವ ಬಗ್ಗೆ ಚರ್ಚಿಸಿ ಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.



## ಪ್ರಾಕೃತ ವಿವಿ ಆರಂಭಕ್ಕೆ ಮರು ಚಾಲನೆ ನೀಡಿದ ಮುಖ್ಯಮಂತ್ರಿಗಳಿಗೆ ಅಭಿನವ ಚಾರುಶ್ರೀಗಳವರಿಂದ ಅಭಿನಂದನೆ



ಬೆಂಗಳೂರು. ಸೆ. 8 : 2018ರ ಭ. ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ಪ್ರಾಕೃತ ವಿಶ್ವವಿದ್ಯಾನಿಲಯ ಸ್ಥಾಪಿಸುವ ಘೋಷಣೆಯಾಗಿತ್ತು. ಇದಕ್ಕಾಗಿ 25 ಕೋಟಿ ರೂಗಳ ಅನುದಾನ ಬಿಡುಗಡೆಯೂ ಆಗಿತ್ತು. ಆದರೆ ಆನಂತರದಲ್ಲಿ ಈ ಕಾರ್ಯ ವೇಗ ಪಡೆಯಲಿಲ್ಲ. ಈಗ ಪ್ರಾಕೃತ ವಿವಿ ಆರಂಭಿಸಲು ಮರು ಚಾಲನೆ ನೀಡಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಭರವಸೆ ನೀಡಿದ್ದಾರೆ.

ಕಮಲಾ ಹಂಪನಾ ಸಾಹಿತ್ಯ ವೇದಿಕೆ ವತಿಯಿಂದ ಬೆಂಗಳೂರಿನ ಗಾಂಧೀಭವನದಲ್ಲಿ ಶುಕ್ರವಾರ ಆಯೋಜಿಸಿದ್ದ 'ಬೆಳಕು ಬಿತ್ತಿದವರು', ಪ್ರಾಕೃತ ಕಥಾ ಸಾಹಿತ್ಯ ಹಾಗೂ ದಿ ಜರ್ನಿ ಆಫ್ ಲೈಫ್ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ಹಿರಿಯ ಸಂಶೋಧಕ ಪ್ರೊ. ಹಂಪ ನಾಗರಾಜಯ್ಯನವರು ಮಾತನಾಡಿ ಪ್ರಾಕೃತ ಭಾಷೆ ಸಂಸ್ಕೃತಕ್ಕಿಂತಲೂ ಹಳೆಯ ಭಾಷೆ. ಭಾಷಾವಾರು ರಾಜಕೀಯದಿಂದಾಗಿ ಪ್ರಾಕೃತ ಭಾಷೆಗೆ ಹಿನ್ನಡೆಯಾಗಿದೆ. ಕನ್ನಡ ಭಾಷೆ ವಿಸ್ತಾರಗೊಳ್ಳಲು ಪ್ರಾಕೃತದ ಕೊಡುಗೆ ಬಹಳಷ್ಟಿದೆ ಎಂದು ಹೇಳಿದರು.

ಪ್ರಾಕೃತ ವಿವಿ ಆರಂಭಕ್ಕೆ ಮರು ಚಾಲನೆ ನೀಡಲು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರಿಗೆ ಶ್ರವಣಬೆಳಗೊಳ ಜೈನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಅಭಿನಂದನೆ ಸಲ್ಲಿಸಿದ್ದಾರೆ.

## ಮೂರನೇ ಶ್ರಾವಣ ಮಂಗಳವಾರದ ಪ್ರಯುಕ್ತ ಶ್ರೀ ಕೂಷ್ಮಾಂಡಿನಿ ಅಮ್ಮನವರಿಗೆ ವಿಶೇಷ ಪೂಜೆ





ಶ್ರವಣಬೆಳಗೊಳ. ಸೆ 5 : ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಮೂರನೇ ಶ್ರಾವಣ ಮಂಗಳವಾರದ ಪ್ರಯುಕ್ತ ಕ್ಷೇತ್ರದ ಅದಿದೇವತೆ ಶ್ರೀ ಕೂಷ್ಮಾಂಡಿನಿ ಅಮ್ಮನವರಿಗೆ ಪೂಜಾ ವಿಧಿವಿಧಾನ ನೆರವೇರಿಸಲಾಯಿತು. 108 ದ್ರವ್ಯಗಳಿಂದ ಅಷ್ಟವಿಧಾರ್ಚನೆ, ಅರ್ಘ್ಯ ಸಮರ್ಪಿಸಲಾಯಿತು. ನಂತರ ಭಂಡಾರಿ ಬಸದಿ ಸುತ್ತಲೂ ಭವ್ಯ ಮೆರವಣಿಗೆ ನೆರವೇರಿತು. ಈ ಕಾರ್ಯಕ್ರಮದಲ್ಲಿ 450ಕ್ಕೂ ಹೆಚ್ಚು ಶ್ರಾವಕ ಶ್ರಾವಕಿಯರು ಪಾಲ್ಗೊಂಡಿದ್ದರು.

## ನಾಲ್ಕನೇ ಶ್ರಾವಣ ಶುಕ್ರವಾರದ ಪ್ರಯುಕ್ತ ಶ್ರೀ ಪದ್ಮಾವತಿ ಅಮ್ಮನವರಿಗೆ ವಿಶೇಷ ಪೂಜೆ



ಶ್ರವಣಬೆಳಗೊಳ. ಸೆ 8 : ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ನಾಲ್ಕನೇ ಶ್ರಾವಣ ಶುಕ್ರವಾರದ ಪ್ರಯುಕ್ತ ಶ್ರೀ ಪದ್ಮಾವತಿ ಅಮ್ಮನವರಿಗೆ ಪೂಜಾ ವಿಧಿವಿಧಾನ ನೆರವೇರಿಸಲಾಯಿತು. ವಿಶೇಷ ಅಷ್ಟವಿಧಾರ್ಚನೆ, 1008 ಕುಂಕುಮಾರ್ಚನೆ, ಅರ್ಘ್ಯ ಹಾಗೂ ಮಹಾಮಂಗಳಾರತಿ ಸಮರ್ಪಿಸಲಾಯಿತು.

## ಮುನಿ ವಾಣಿ



### ದುಃಖ ನಿವಾರಣೆಯ ದಿವ್ಯ ಔಷದ ಣಮೋಕಾರ ಮಹಾಮಂತ್ರ

ಪೂರ್ವಾಚಾರ್ಯರು ಷಟ್ಖಂಡಾಗಮ ಗ್ರಂಥದಲ್ಲಿ ಬರೆದಿರುವ ಣಮೋಕಾರ ಮಹಾಮಂತ್ರವು ಜೀವಿಗಳ ದುಃಖವನ್ನು ಕ್ಷಣ ಮಾತ್ರದಲ್ಲಿ ಕಳೆಯುವ ಮಹಾಮಂತ್ರವಿದೆ. ಇದು ಎಲ್ಲಾ ಮಂತ್ರಗಳಿಗೂ ರಾಜ ಮಂತ್ರವಿದೆ. ಮಂತ್ರಗಳರಾಜ ಣಮೋಕಾರ ಮಂತ್ರವಿದೆ.

ಜೀವಿಗಳ ಜನ್ಮಾಂತರದಲ್ಲಿ ಬರುವ ಹಲವಾರು ಬಗೆಯ ದುಃಖವನ್ನು ನಿವಾರಿಸುವ ಹಾಗೂ ರಕ್ಷಣೆ ನೀಡುವ ಶಕ್ತಿ ಈ ಮಂತ್ರದಲ್ಲಿದೆ. ಒಂದು ಶ್ವಾನಕ್ಕೆ ಣಮೋಕಾರ ಮಂತ್ರದ ಬಗ್ಗೆ ಏನೂ ಅರಿವಿರದಿದ್ದರೂ, ಅದು ಮರಣ ಹೊಂದುವ ಸಂದರ್ಭದಲ್ಲಿ ಕೇವಲ ಮಂತ್ರವನ್ನು ಶ್ರದ್ಧೆಯಿಂದ ಆಲಿಸುವುದರಿಂದಲೇ ಅದು ಸದ್ಗತಿ ಪ್ರಾಪ್ತಿ ಮಾಡಿಕೊಳ್ಳುತ್ತದೆ.

ಣಮೋಕಾರ ಮಂತ್ರದ ಮೇಲೆ ಶ್ರದ್ಧೆ ಮತ್ತು ನಂಬಿಕೆಯನ್ನು ಹೊಂದಿ ತಪ್ಪಿಲ್ಲದೆ ವಿಧಿ ಪೂರ್ವಕವಾಗಿ ಸ್ಮರಣೆ ಮಾಡುವುದರಿಂದ ಸಕಲ ದುಃಖಗಳು ನಿವಾರಣೆಯಾಗುತ್ತದೆ.

ಈ ಜಗತ್ತಿನ ಸೃಷ್ಟಿಯು ದೇವರಿಂದ ಆದುದಲ್ಲ. ದೇವರು ಸೃಷ್ಟಿಕರ್ತನಲ್ಲ. ಅದು ಅನಾದಿಯಿಂದ ಇದೆ. ಹಾಗೇ ಣಮೋಕಾರ ಮಂತ್ರ ಅನಾದಿನಿಧನವಾದ ಮಂತ್ರವಿದೆ.

ನಮಗೆ ಮೃತ್ಯು ಯಾವಾಗ ಬೇಕಾದರೂ ಬರಬಹುದು, ಅದರ ಸುರಕ್ಷೆಗಾಗಿ ಹಾಗೂ ಸದ್ಗತಿಗಾಗಿ ಯಾವುದೇ ಸಂದರ್ಭದಲ್ಲಿ ಯಾವುದೇ ಸ್ಥಿತಿಯಲ್ಲಿ ಣಮೋಕಾರ ಸ್ಮರಣೆ ಮಾಡಬೇಕು. ಕೇವಲ ಕಷ್ಟ ಬಂದಾಗ, ದುಃಖ ಉಂಟಾದಾಗ ಮಾತ್ರ ಣಮೋಕಾರ ಮಂತ್ರದ ಸ್ಮರಣೆಯಲ್ಲ. ಅರೋಗ್ಯವಾಗಿರಲಿ ಇಲ್ಲದಿರಲಿ ಎಲ್ಲಾ ಸಂದರ್ಭದಲ್ಲೂ ಣಮೋಕಾರ ಮಂತ್ರದ ಸ್ಮರಣೆ ಅಗತ್ಯವಿದೆ. ಇದರಿಂದ ಅದ್ಭುತವಾದ ಪರಿಣಾಮ ಉಂಟಾಗುತ್ತದೆ. ಅರೋಗ್ಯದಿಂದ ಇದ್ದಾಗ ಯಾವುದೇ ರೋಗರುಜಿನ ಬರದಿರಲೆಂದು ಸಂರಕ್ಷಣೆಗಾಗಿ ಮೃತ್ಯು ಸಂದರ್ಭದಲ್ಲಿ ಮೃತ್ಯುವಿನ ಜಯ ಸಿಗದಿದರೂ, ಉತ್ತಮ ಗತಿ ಪ್ರಾಪ್ತಿಯಾಗಲೆಂದು ಸ್ಮರಣೆ ಮಾಡಬೇಕು. ಈ ಎರಡರ ರಕ್ಷೆಯು ಣಮೋಕಾರ ಮಂತ್ರದ ಸ್ಮರಣೆ ಮಾಡುವುದರಿಂದ ಲಭಿಸುತ್ತದೆ.

ಣಮೋಕಾರ ಮಂತ್ರವು ಅಪರಾಜಿತ ಮಂತ್ರವಿದೆ. ಇದು ಎಲ್ಲಾ ಪ್ರಕಾರದ ವಿಘ್ನಗಳನ್ನು ನಾಶಮಾಡುತ್ತದೆ. ಅದ್ದರಿಂದ ಜೀವಿತಕಾಲದಲ್ಲಿ ಎಲ್ಲಾ ಹಂತಗಳಲ್ಲಿ ಣಮೋಕಾರ ಮಂತ್ರದ ಸ್ಮರಣೆ ಮಾಡುವುದರಿಂದ ವಿಘ್ನಗಳು ಬರುವುದನ್ನು ತಡೆಯುವ ಶಕ್ತಿ ಈ ಮಹಾಮಂತ್ರಕ್ಕಿದೆ.

ಈ ಸಂಸಾರದಲ್ಲಿ ಪ್ರತಿಯೊಬ್ಬರು ಅಸುರಕ್ಷಿತವಾಗಿದ್ದು, ಜೀವನದ ಪ್ರತಿಯೊಂದು ಹಂತದಲ್ಲಿ ಣಮೋಕಾರ ಮಂತ್ರ ಸ್ಮರಿಸುವುದರಿಂದ ರಕ್ಷಣೆ ಸಿಗುತ್ತದೆ. ಸಂರಕ್ಷಣೆ ಮತ್ತು ಸದ್ಗತಿಗಾಗಿ ಣಮೋಕಾರ ಮಹಾಮಂತ್ರವೇ ಆಧಾರವಾಗಿದೆ ಎಂಬುದು ಅನಾದಿ ಕಾಲದಿಂದಲೂ ನಡೆದು ಬಂದಿದೆ. ಅದಕ್ಕಾಗಿ ಜೀವನದ ಉದ್ಧಾರಕ್ಕಾಗಿ ಣಮೋಕಾರ ಮಹಾಮಂತ್ರ ದಿವ್ಯಾಮೃತವಾಗಿದೆ.

– ಪರಮ ಪೂಜ್ಯ 108 ಶ್ರೀ ಅಮೋಘ ಕೀರ್ತಿ ಮುನಿಗಳು

## ವಿಶೇಷ ದಿನಗಳು

**16.09.2023 ಶನಿವಾರ :** ಷೋಡಶ ಕಾರಣ ನೋಂಪಿ

**17.09.2023 ಭಾನುವಾರ :** ಆ. ಶ್ರೀ ಶಾಂತಿಸಾಗರ ಮಹಾರಾಜರ ಪುಣ್ಯತಿಥಿ

**20.09.2023 ಬುಧವಾರ :** ದಶಲಕ್ಷಣ ಪ್ರಾರಂಭ, ಪಂಚಮೇರು ವ್ರತ

**22.09.2023 ಶುಕ್ರವಾರ :** ನಿರ್ದೋಷ ಸಪ್ತಮಿ ವ್ರತ

**23.09.2023 ಶನಿವಾರ :** ಅಷ್ಟಮಿ ಭ. ಪುಷ್ಪದಂತರ ನಿರ್ವಾಣ ಕಲ್ಯಾಣ

**25.09.2023 ಸೋಮವಾರ :** ಸುಗಂಧ ದಶಮಿ ನೋಂಪಿ ತಿಥಿ ಕ್ಷಯ ಆಗಿರುವುದಕ್ಕೆ ಎರಡು ಧರ್ಮಗಳನ್ನು ಬೆಳಗಬೇಕು

**27.09.2023 ಬುಧವಾರ :** ಅನಂತ ತ್ರಯೋದಶಿ ನೋಂಪಿ, ರತ್ನತ್ರಯ ನೋಂಪಿ

**28.09.2023 ಗುರುವಾರ :** ಅನಂತ ಚತುರ್ದಶಿ ವ್ರತ

**29.09.2023 ಶುಕ್ರವಾರ :** ಅನಂತ ಹುಣ್ಣಿಮ ದಶಲಕ್ಷಣ ವ್ರತ ಮುಕ್ತಾಯ, ಕ್ಷಮಾವಳಿ

**30.09.2023 ಶನಿವಾರ :** ಷೋಡಶ ಭಾವನಾ ವಿಸರ್ಜನೆ

**01.10.2023 ಭಾನುವಾರ :** ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಕ್ಷಮಾವಳಿ

## ಜೈನ್ ಕ್ವಿಜ್

: ಪ್ರಶ್ನೆಗಳು :

1) ಪಂಚಣಮೋಕಾರ ಮಂತ್ರ ರಚಿಸಿದವರು ಯಾರು ?
2) ಪಂಚಣಮೋಕಾರ ಮಂತ್ರದ ಪ್ರಥಮ ಉಲ್ಲೇಖ ಎಲ್ಲಿ ದೊರೆಯುತ್ತದೆ ?
3) ದಶಲಕ್ಷಣ ಪರ್ವಕ್ಕಿರುವ ಇನ್ನೊಂದು ಹೆಸರೇನು ?
4) ಯಾವ ಯಾವ ತೀರ್ಥಂಕರರು ತೀರ್ಥಂಕರ ಪದವಿ, ಕಾಮದೇವ ಮತ್ತು ಚಕ್ರವರ್ತಿ – ಈ ಮೂರು ಪದವಿಗಳನ್ನು ಹೊಂದಿದ್ದಾರೆ ?
5) ಸಿದ್ಧರಿಗೆ ಎಷ್ಟು ಮೂಲಗುಣಗಳು ಇರುತ್ತವೆ ?

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 25–09–2023ರ ಒಳಗೆ ದೂರವಾಣಿ ಸಂಖ್ಯೆ : **8660118443** ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸುವುದು.

ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹಿಂದಿನ ಸಂಚಿಕೆಯ ಉತ್ತರಗಳು :
1) ಅ ಸಿ ಆ ಉ ಸಾ 2) 35 ಅಕ್ಷರಗಳು 3) ಓಂ
4) 10 ಅತಿಶಯಗಳು 5) ಅರ್ಧಮಾಗಧಿ ಪ್ರಾಕೃತ ಭಾಷೆ

ಮೊದಲು ಸರಿ ಉತ್ತರ ಬರೆದವರು :
1) ಗೀತಾ ಆನಂದ್ ಎಂ.ಎನ್, ಮೈಸೂರು
2) ಭುವನೇಶ್ವರಿ, ಮಾಯಸಂದ್ರ
3) ಸೌಜನ್ಯ ಆನಂದ ಬಾಗೆ, ಭೋಜ
4) ಮಲ್ಲಿನಾಥ ಹುಕ್ಕೇರಿ, ಹಾರೋಗೇರಿ
5) ನಿಶ್ಚಲ ಸನತ್‌ಕುಮಾರ್ ಜೈನ್, ಚಿಕ್ಕಮಗಳೂರು

ಇವರುಗಳಿಗೆ ಶುಭಾಷಯಗಳು

## ನೂಲುಹುಣ್ಣಿಮೆ ಕಾರ್ಯಕ್ರಮ

ಶ್ರವಣಬೆಳಗೊಳ. ಆ. 31 : ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಭಂಡಾರಿ ಬಸದಿಯಲ್ಲಿ ನೂಲುಹುಣ್ಣಿಮೆ ಪ್ರಯುಕ್ತ ಹವನ ಹಾಗೂ ಚೋವೀಸ ತೀರ್ಥಂಕರರಿಗೆ ಪಂಚಾಮೃತ ಅಭಿಷೇಕ ನೆರವೇರಿಸಿ ಊರಿನ ಸಮಸ್ತ ಶ್ರಾವಕರಿಗೆ ಹಾಗೂ ಮಠದ ಕಾರ್ಯಕರ್ತರಿಗೆ ಪೂಜ್ಯ ಸ್ವಾಮೀಜಿಯವರು ಜನಿವಾರ ಧಾರಣೆ ಮಾಡಿದರು




## ಶಿಕ್ಷಕರ ದಿನಾಚರಣೆ

**ಶ್ರವಣಬೆಳಗೊಳ. ಸೆ 5 :** ಶಿಕ್ಷಕರ ದಿನಾಚರಣೆ ಪ್ರಯುಕ್ತ ಶ್ರೀಮಠಕ್ಕೆ ಸೇರಿದ ಶಿಕ್ಷಣ ಸಂಸ್ಥೆಗಳ 100 ಕ್ಕೂ ಅಧಿಕ ಬೋಧಕ ಸಿಬ್ಬಂದಿಯವರಿಗೆ ಪೂಜ್ಯ ಶ್ರೀಗಳವರಿಂದ ಶುಭಾಶೀರ್ವಾದ ನೀಡಿ ಗೌರವಿಸಲಾಯಿತು.



## ಅವಿರೋಧ ಆಯ್ಕೆ



**ಬೆಂಗಳೂರು :** ಕರ್ನಾಟಕ ಹಿರಿಯ ನಾಗರೀಕರ ವೇದಿಕೆಗಳ ಒಕ್ಕೂಟಕ್ಕೆ **ಪ್ರಧಾನ ಕಾರ್ಯದರ್ಶಿ**ಯಾಗಿ **ಭದ್ರಾವತಿಯ ಎ.ಪಿ. ಕುಮಾರ್**ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


## ಕೆ.ಜೆ.ಎ. ಸರ್ವಸದಸ್ಯರ ವಾರ್ಷಿಕ ಸಭೆ

**ಬೆಂಗಳೂರು : ದಿನಾಂಕ : 30–09–2023ರಂದು ಬೆಳಿಗ್ಗೆ 10–30ಕ್ಕೆ ಕರ್ನಾಟಕ ಜೈನ ಅಸೋಸಿಯೇಷನ್ನಿನ ಸರ್ವಸದಸ್ಯರ ವಾರ್ಷಿಕ ಸಭೆಯು ಕರ್ನಾಟಕ ಜೈನ ಭವನದಲ್ಲಿ ನಡೆಯಲಿದೆ.**

## ಅಮೆರಿಕದ ನಾಸಾಗೆ ಆಗಮ್ ಜೈನ್ ಆಯ್ಕೆ

ಇಂದೋರ್ : 21 ವರ್ಷದ ಆಗಮ್ ಜೈನ್‌ರವರು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾದ ಅಂತರಾಷ್ಟ್ರೀಯ ವಾಯು ಮತ್ತು ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಆಯ್ಕೆಯಾಗಿದ್ದಾರೆ. ಈ ಕಾರ್ಯಕ್ರಮವು ನಾಸಾದ ಹಂಟ್ಸ್‌ವಿಲ್ಲೆ ಕೇಂದ್ರದಲ್ಲಿ ನಡೆಯಲಿದೆ. ಆಗಮ್ ಸೆಪ್ಟೆಂಬರ್ 18 ರಂದು ನಾಸಾಗೆ ತೆರಳಲಿದ್ದಾರೆ.

ಆಗಮ್ ಜೈನ್‌ಗೆ ಬಾಲ್ಯದಿಂದಲೂ ಬಾಹ್ಯಾಕಾಶದ ಬಗ್ಗೆ ಒಲವಿದ್ದು, 5 ನೇ ತರಗತಿಯಲ್ಲಿ ಬಾಹ್ಯಾಕಾಶದ ಬಗ್ಗೆ ಆಸಕ್ತಿ ಹೆಚ್ಚಾಯಿತು. ಬಾಹ್ಯಾಕಾಶ, ಗ್ರಹಗಳು ಮತ್ತು ನಕ್ಷತ್ರಗಳ ಪ್ರಪಂಚವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಅವರ ಕುತೂಹಲಕ್ಕೆ ಮೊದಲು ಇಸ್ರೋದಲ್ಲಿ ಇಂಟರ್ನ್‌ಶಿಪ್ ಅವಕಾಶ ಸಿಕ್ಕಿತು. ನಾಸಾದ ಅಂತರಾಷ್ಟ್ರೀಯ ವಾಯು ಮತ್ತು ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಆಯ್ಕೆಯಾದ ಎರಡನೇ ಭಾರತೀಯ ವಿದ್ಯಾರ್ಥಿ ಆಗಮ್ ಜೈನ್.




## ಆದರ್ಶ ಜೈನ ಮಹಿಳಾರತ್ನ ಪ್ರಶಸ್ತಿ



**ಮೈಸೂರು :** ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ವತಿಯಿಂದ ಕೊಡಮಾಡುವ 2023ನೇ ಸಾಲಿನ ಆದರ್ಶ ಜೈನ ಮಹಿಳಾರತ್ನ ಪ್ರಶಸ್ತಿಗೆ ನಿವೃತ್ತ ಪ್ರಾಧ್ಯಾಪಕರಾದ ಲೇಖಕಿ **ಮೈಸೂರಿನ ಡಾ. ಸರಸ್ವತಿ ವಿಜಯ ಕುಮಾರ್**ರವರು ಆಯ್ಕೆಯಾಗಿದ್ದಾರೆ. ಅಕ್ಟೋಬರ್ 1 ರಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ನೆರವೇರಲಿದೆ.

## ಪೇಪರ್ ಪ್ರೆಸೆಂಟೇಶನ್‌ನಲ್ಲಿ ಪ್ರಥಮ ಸ್ಥಾನ

**ಶ್ರವಣಬೆಳಗೊಳ. ಆ. 10 :** ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳಾದ ಗಗನಾ ಜೈನ್, ಮಾನಸ್ವಿ ವಿ. ಶೆಟ್ಟಿ ಮತ್ತು ಮಾನಸಿ ರಾಮಮೂರ್ತಿ ಇವರುಗಳು ಸಾಯಿತರಂಗ ಎಂಬ ರಾಜ್ಯ ಮಟ್ಟದ ಪೇಪರ್ ಪ್ರಸೆಂಟೇಶನ್‌ನಲ್ಲಿ ಪ್ರಥಮ ಸ್ಥಾನ ಪಡೆದು ಕಾಲೇಜಿಗೆ ಮತ್ತು ಕ್ಷೇತ್ರಕ್ಕೆ ಹೆಮ್ಮೆಯನ್ನು ತಂದಿದ್ದಾರೆ. ಪ.ಪೂ. ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಜಿಯವರು ಶುಭಾಶಿರ್ವಾದವನ್ನು ತಿಳಿಸಿರುತ್ತಾರೆ.




## ವಿಜಯಪುರ ಜಿಲ್ಲೆ ದಿಗಂಬರ ಜೈನ ಬಡ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಘೋಷಣೆ





**ಮುದ್ದೆಬಿಹಾಳ :** ಅಪ್ಪಾಸಾಹೇಬ ತವನಪ್ಪಾಬಾಬಾ ಮುತ್ತಿನ ಜೈನ ಅಲ್ಪಸಂಖ್ಯಾತರ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಿಜಯಪುರ ಜಿಲ್ಲೆಯ ದಿಗಂಬರ ಜೈನ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರತಿವರ್ಷ ಶಿಷ್ಯವೇತನ ಕೊಡಲಾಗುವುದೆಂದು ಟ್ರಸ್ಟ್‌ನ ಅಧ್ಯಕ್ಷರಾದ ಅಪ್ಪಾಸಾಹೇಬ ತವನಪ್ಪಾಬಾಬ ಮುತ್ತಿನರವರು ಘೋಷಿಸಿದ್ದಾರೆ.

## ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

**ಉಗಾರಬದ್ರುಕ :** ದಿ. ಮಿರ್ಜಿ ಅಣ್ಣಾರಾಯ ಸ್ಮಾರಕ ಸಮಿತಿ ಮತ್ತು ಪದ್ಮಾವತಿ ಶಿಕ್ಷಣ ಸಂಸ್ಥೆಗಳ ವತಿಯಿಂದ ಮಿರ್ಜಿ ಅಣ್ಣಾರಾಯರ 105 ಜನ್ಮ ಜಯಂತಿ ಪ್ರಯುಕ್ತ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನೆರವೇರಿತು. 2023ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ, ಪ್ರಮಾಣಪತ್ರ, ಪುಸ್ತಕಗಳನ್ನು ನೀಡಿ ಗೌರವಿಸಲಾಯಿತು.

## ದೇಶಭಕ್ತಿಗೀತೆ ಸ್ಪರ್ಧೆ

**ಹುಬ್ಬಳ್ಳಿ :** ಶಾಂತಿನಾಥ ಮಹಿಳಾ ಸಮಾಜದ ವತಿಯಿಂದ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಹಿಳೆಯರಿಗೆ ದೇಶಭಕ್ತಿಗೀತೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ ಶೂಟರ್ ರವೀಂದ್ರ ಬಾಳೆಹೊಸೂರ ಹಾಗೂ ಧ್ವಜ ತಯಾರಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವ ಇಬ್ಬರು ಮಹಿಳೆಯರನ್ನು ಸನ್ಮಾನಿಸಲಾಯಿತು.


## ಕನಕಗಿರಿ ಪೂಜ್ಯ ಭಟ್ಟಾರಕರಿಂದ ಭಕ್ತಿ ವಿನಯಾಂಜಲಿ

**ಶ್ರವಣಬೆಳಗೊಳ. ಸೆ. 2 :** ಪ್ರಾತಃಸ್ಮರಣೀಯ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಆಶಯದಂತೆ ಶ್ರವಣಬೆಳಗೊಳ ಶ್ರೀ ಧವಲತೀರ್ಥಂ ಪರಿಸರದಲ್ಲಿ ನೂತನವಾಗಿ ಉದ್ಘಾಟನೆಗೊಂಡ ಕರ್ಮಯೋಗಿ ಚಾರುಶ್ರೀ ತೋಟದಲ್ಲಿ ತೆಂಗು, ಮಾವು ಹಾಗೂ ಇತರೆ ಫಲಗಳ ಸಸಿ ನೆಡುವ ಮೂಲಕ ಕನಕಗಿರಿ ಕ್ಷೇತ್ರದ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿಯವರು ತಮ್ಮ ದೀಕ್ಷಾ ಗುರುಗಳಿಗೆ ಭಕ್ತಿಯ ವಿನಯಾಂಜಲಿ ಸಲ್ಲಿಸಿದರು.



## ಡಾ. ದೇವೇಂದ್ರಕೀರ್ತಿ ಶ್ರೀಗಳವರಿಂದ ಭಕ್ತಿ ವಿನಯಾಂಜಲಿ

**ಶ್ರವಣಬೆಳಗೊಳ. ಸೆ. 11 :** ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಪ್ರಾತಃಸ್ಮರಣೀಯ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ನಿಶಿದಿ ಸ್ಥಳಕ್ಕೆ ಭೇಟಿ ನೀಡಿ ಅರ್ಘ್ಯ ಸಮರ್ಪಿಸಿದರು ನಂತರ ಇತ್ತೀಚೆಗೆ ಲೋಕಾರ್ಪಣೆಗೊಂಡ ಕರ್ಮಯೋಗಿ ಚಾರುಶ್ರೀ ತೋಟದಲ್ಲಿ ತೆಂಗು, ಮಾವು ಹಾಗೂ ಇತರೆ ಫಲಗಳ ಸಸಿ ನೆಡುವ ಮೂಲಕ ತಮ್ಮ ದೀಕ್ಷಾ ಗುರುಗಳಿಗೆ ಭಕ್ತಿಯ ವಿನಯಾಂಜಲಿ ಸಲ್ಲಿಸಿದರು.








## ಕಂಬದಹಳ್ಳಿ ಪೂಜ್ಯ ಭಾನುಕೀರ್ತಿ ಶ್ರೀಗಳವರ 27ನೇ ಪಟ್ಟಾಭಿಷೇಕ ಮಹೋತ್ಸವ

**ಕಂಬದಹಳ್ಳಿ. ಸೆ. 10 :** ಶ್ರೀಕ್ಷೇತ್ರ ಕಂಬದಹಳ್ಳಿಯ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ 27ನೇ ಪಟ್ಟಾಭೀಷೇಕ ಮಹೋತ್ಸವದ ಅಂಗವಾಗಿ ಶ್ರೀಕ್ಷೇತ್ರ ಶ್ರವಣಬೆಳಗೊಳ ಜೈನಮಠದ ವತಿಯಿಂದ ಗೌರವ ಸಮರ್ಪಣೆ ಸಲ್ಲಿಸಲಾಯಿತು.



## ಬೆಳ್ಳಿಯ ಬಾಗಿಲು ಮತ್ತು ಚೌಕಟ್ಟು ಅಳವಡಿಕೆಗೆ ಶುಭಾರಂಭ

**ಶ್ರವಣಬೆಳಗೊಳ. ಸೆ. 11 :** ಶ್ರೀಕ್ಷೇತ್ರ ಶ್ರವಣಬೆಳಗೊಳ ಶ್ರೀಮಠದ ಬಸದಿಯಲ್ಲಿರುವ ಶ್ರೀ ಚಂದ್ರನಾಥ ತೀರ್ಥಂಕರರ ಹಾಗೂ ಮಾತೆ ಶ್ರೀ ಕೂಷ್ಮಾಂಡಿನಿ ಅಮ್ಮನವರ ಸನ್ನಿಧಿಯಲ್ಲಿ ಬಾಗಿಲು ಮತ್ತು ಬಾಗಿಲ ಚೌಕಟ್ಟಿಗೆ ಬೆಳ್ಳಿ ಕವಚ ಮಾಡಿಸಲು ಬೆಳ್ಳಿಯ ಸಂಗ್ರಹಣೆಗೆ ಪ.ಪೂ. ಜಗದ್ಗುರು ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹಾಗೂ ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಶುಭಾರಂಭ ಮಾಡಿದರು.

ಈ ಕಾರ್ಯಕ್ಕೆ ದಾನ ನೀಡಲಿಚ್ಛಿಸುವವರು ಶ್ರೀಮಠದ ಕಛೇರಿಯನ್ನು ಸಂಪರ್ಕಿಸಿ ಭಕ್ತಿ ಸಮರ್ಪಿಸಬಹುದು. ಸಂಪರ್ಕ ಸಂಖ್ಯೆ : 9844143722.




## ಪ್ರಾತಃಸ್ಮರಣೀಯ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ನಿಶಿಧಿ ಮಂಟಪ ನಿರ್ಮಾಣ ಕಾರ್ಯಕ್ಕೆ ಶುಭಾರಂಭ

**ಶ್ರವಣಬೆಳಗೊಳ. ಸೆ. 11 :** ಪ್ರಾತಃಸ್ಮರಣೀಯ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ನಿಶಿಧಿ ಮಂಟಪ ನಿರ್ಮಾಣ ಕಾರ್ಯಕ್ಕೆ ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು, ಹೊಂಬುಜ ಜೈನ ಮಠದ ಪ.ಪೂ. ಜಗದ್ಗುರು ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹಾಗೂ ಕಂಬದಹಳ್ಳಿಯ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಪಾವನ ಸಾನ್ನಿಧ್ಯದಲ್ಲಿ, ಕನಕಗಿರಿಯ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿಯವರ, ತಮಿಳುನಾಡಿನ ಅರಿಹಂತಗಿರಿಯ ಪ.ಪೂ. ಸ್ವಸ್ತಿಶ್ರೀ ಧವಲಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಹಾಗೂ ಸ್ವಾದಿ ಮಠದ ಪ.ಪೂ. ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಕಲ್ಲಿನ ಶಿಲ್ಪಿಯೊಂದಿಗೆ ಚರ್ಚಿಸಿ ಶುಭಾರಂಭ ಮಾಡಲಾಯಿತು.



## ಎಸ್.ಎನ್. ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಚಂದ್ರಗಿರಿ–ಚಿಕ್ಕಬೆಟ್ಟ ಶೈಕ್ಷಣಿಕ ದರ್ಶನ

**ಶ್ರವಣಬೆಳಗೊಳ. ಸೆ 1 :** ಎಸ್.ಎನ್. ಪಿಯು ಕಾಲೇಜಿನ ವಿದ್ಯಾರ್ಥಿಗಳಿಗೆ ಚಂದ್ರಗಿರಿ–ಚಿಕ್ಕಬೆಟ್ಟ ಶೈಕ್ಷಣಿಕ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಹಿರಿಯ ಉಪನ್ಯಾಸಕ ಡಾ. ಎಸ್. ದಿನೇಶ್ ಅವರು ವಿದ್ಯಾರ್ಥಿಗಳಿಗೆ ಶ್ರವಣಬೆಳಗೊಳದ ಇತಿಹಾಸ, ಚಂದ್ರಗಿರಿ–ವಿಂಧ್ಯಗಿರಿ ಹಾಗೂ ಕಲ್ಯಾಣಿಯ ಬಗೆಗಿನ ಪ್ರಾಚೀನತೆ, ವಿಶೇಷವಾಗಿ ಚಿಕ್ಕಬೆಟ್ಟದಲ್ಲಿರುವ ಬಸದಿಗಳು, ನಿಶಧಿ ಮಂಟಪಗಳು, ಪ್ರಾಕೃತಿಕ ದೊಣೆಗಳು, ಮಾನಸ್ತಂಬಗಳು ಹಾಗೂ ಬಸದಿಗಳ ವಾಸ್ತು ಶಿಲ್ಪ, ಮೂರ್ತಿ ಶಿಲ್ಪಗಳ ಬಗ್ಗೆ ವಿವರಿಸಿದರು. ಸ್ಥಳೀಯ ಇತಿಹಾಸ, ಸಾಂಸ್ಕೃತಿಕ ಹಿನ್ನೆಲೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕಾರ್ಯವಾಗಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ವೀಣಾ, ರಂಜಿತ, ಸಿಬ್ಬಂದಿ ಶಂಕರೇಗೌಡ ಹಾಗೂ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಹಾಜರಿದ್ದರು.



## ವಿಂಧ್ಯಗಿರಿ ಮಹಾದ್ವಾರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ

**ಶ್ರವಣಬೆಳಗೊಳ. ಸೆ. 3 :** ಶ್ರೀಕ್ಷೇತ್ರ ಶ್ರವಣಬೆಳಗೊಳದ ವಿಂಧ್ಯಗಿರಿ ದೊಡ್ಡಬೆಟ್ಟದ ಮಹಾದ್ವಾರದಲ್ಲಿ ನೂತನವಾಗಿ ಅಳವಡಿಸಿದ ಆರ್.ಓ. ಶುದ್ಧ ಕುಡಿಯುವ ನೀರಿನ ಘಟಕವನ್ನು ಶ್ರೀಜೈನ ಮಠದ ಪೀಠಾಧ್ಯಕ್ಷರಾದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಚಾಲನೆ ನೀಡಿದರು.

ಗುಬ್ಬಿಯ ಅಭಿನಂದನ್ ಆಸ್ಪತ್ರೆ ಮಾಲೀಕರಾದ ಡಾ. ಅಭಿನಂದನ್‌ರವರು ವಿಂಧ್ಯಗಿರಿ ದ್ವಾರ ಹಾಗೂ ಬಾಹುಬಲಿ ಕಾಲೇಜಿನಲ್ಲಿ 2 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ದಾನವಾಗಿ ಅಳವಡಿಸಿ ಕ್ಷೇತ್ರಕ್ಕೆ ಆಗಮಿಸುವ ಭಕ್ತರ ದಣಿವನ್ನು ತಣಿಸಲು ಹಾಗೂ ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಕೈಗೊಂಡಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದು ಪೂಜ್ಯ ಶ್ರೀಗಳವರು ಹೇಳಿದರು. ಈ ಸಂದರ್ಭದಲ್ಲಿ ಡಾ. ಅಭಿನಂದನ್ ಹಾಗೂ ಕುಟುಂಬದವರು ಉಪಸ್ಥಿತರಿದ್ದರು.








## ಕೊನೆಯ ಶ್ರಾವಣ ಮಂಗಳವಾರದ ಪ್ರಯುಕ್ತ ಶ್ರೀ ಕೂಷ್ಮಾಂಡಿನಿ ಅಮ್ಮನವರಿಗೆ ವಿಶೇಷ ಪೂಜೆ









ಶ್ರವಣಬೆಳಗೊಳ. ಸೆ 12 : ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಕೊನೆಯ ಶ್ರಾವಣ ಮಂಗಳವಾರದ ಪ್ರಯುಕ್ತ ಕ್ಷೇತ್ರದ ಅದಿದೇವತೆ ಶ್ರೀ ಕೂಷ್ಮಾಂಡಿನಿ ಅಮ್ಮನವರಿಗೆ ಪೂಜಾ ವಿಧಿವಿಧಾನ ನೆರವೇರಿಸಲಾಯಿತು. 108 ದ್ರವ್ಯಗಳಿಂದ ಅಷ್ಟವಿಧಾರ್ಚನೆ, ಅಷ್ಟಾವಧಾನ, ಗಾಯನ, ವಾದ್ಯ, ನೃತ್ಯ, ಶಂಖ, ಘಂಟೆಗಳಿಂದ ತಾಯಿಗೆ ಪೂಜೆ ಸಮರ್ಪಿಸಲಾಯಿತು. ಈ ಕಾರ್ಯಕ್ರಮಕ್ಕೆ ಮಂಡ್ಯ, ಹಾಸನ, ಮೈಸೂರು, ತುಮಕೂರು, ಬೆಂಗಳೂರು ಮತ್ತು ಸುತ್ತಮುತ್ತಲಿನ 650ಕ್ಕೂ ಹೆಚ್ಚು ಶ್ರಾವಕ ಶ್ರಾವಕಿಯರು ಪಾಲ್ಗೊಂಡಿದ್ದರು.

## ಬಿಸಿಇ ಕಾಲೇಜಿನಲ್ಲಿ ಅರಿವು ಕಾರ್ಯಕ್ರಮ

ಶ್ರವಣಬೆಳಗೊಳ. ಸೆ. 10 : ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 2023ನೇ ಸಾಲಿನ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ನೂತನ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ 120 ವಿದ್ಯಾರ್ಥಿಗಳು ಹಾಗೂ 300 ಜನ ಪೋಷಕರು ಭಾಗವಹಿಸಿದ್ದರು.




## ಧರ್ಮ ಬಂಧುಗಳಲ್ಲಿ ವಿನಂತಿ

ಶ್ರೀ ಶ್ರವಣಬೆಳಗೊಳ ದಿಗಂಬರ ಜೈನ ಜ್ಞಾನ ಪ್ರಸಾರಕ ಸಂಘ(ರಿ.) ದ ವತಿಯಿಂದ ಶ್ರವಣಬೆಳಗೊಳ ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಸದುದ್ದೇಶದಿಂದ ಕೆಳಕಂಡ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ನಡೆಸಲಾಗುತ್ತಿದೆ. 2000 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ನಮ್ಮ ವಿದ್ಯಾಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಕೃಪಾಶೀರ್ವಾದದಿಂದ ನಡೆಸಲ್ಪಡುತ್ತಿರುವ ಶ್ರೀ ಶ್ರವಣಬೆಳಗೊಳ ದಿಗಂಬರ ಜೈನ ಜ್ಞಾನ ಪ್ರಸಾರಕ ಸಂಘ (ರಿ.) ದ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ದಿಗಂಬರ ಜೈನ ಧರ್ಮೀಯರು ನಮ್ಮ ಶಿಕ್ಷಣಸಂಸ್ಥೆಗೆ ಶಿರೋಮಣಿ ಸಂರಕ್ಷಕ, ಪರಮ ಸಂರಕ್ಷಕ ಮತ್ತು ಸಂರಕ್ಷಕರ ಗೌರವಾನ್ವಿತ ಪದವಿಯನ್ನು ಪಡೆಯಬಯಸುವವರು ಶಿಕ್ಷಣ ಸಂಸ್ಥೆಗಳ ಪ್ರಗತಿಗಾಗಿ, ಸಂಸ್ಥೆಯ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಗ್ರಾಮೀಣ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಬಯಸುವವರು ಈ ಕೆಳಕಂಡ ವಿವರದಂತೆ ದಾನ ನೀಡಿ ಪುಣ್ಯಕಾರ್ಯದಲ್ಲಿ ಭಾಗಿಯಾಗಬಹುದು.

ಶಿರೋಮಣಿ ಸಂರಕ್ಷಕರು ರೂ. 11,00,000–00
ಪರಮ ಸಂರಕ್ಷಕರು ರೂ. 5,00,000–00
ಸಂರಕ್ಷಕರು ರೂ. 3,00,000–00

### ಎಸ್‌ಎಸ್‌ಡಿಜೆಜೆಪಿ ಸಂಘದ ವತಿಯಿಂದ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳು

ಶ್ರೀ ಅಂಬಿಕಾ ಹಿರಿಯ ಪ್ರಾಥಮಿಕ ಶಾಲೆ
ಶ್ರೀಮತಿ ಎಸ್.ಎನ್. ಕನ್ನಡ ಮಾಧ್ಯಮ ಪ್ರೌಢಶಾಲೆ
ಶ್ರೀ ಅಂಬಿಕಾ ಆಂಗ್ಲ ಮಾಧ್ಯಮ ಪ್ರೌಢಶಾಲೆ
ಶ್ರೀಮತಿ ಎಸ್.ಎನ್. ಪದವಿಪೂರ್ವ ಕಾಲೇಜು
ಶ್ರೀ ಬಾಹುಬಲಿ ಪಾಲಿಟೆಕ್ನಿಕ್
ಶ್ರೀ ಬಾಹುಬಲಿ ಇಂಜಿನಿಯರಿಂಗ್ ಕಾಲೇಜು
ಶ್ರೀ ಬಾಹುಬಲಿ ಸ್ಕೂಲ್ ಆಫ್ ನರ್ಸಿಂಗ್
ಬಿ.ಸಿ.ಇ. ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯ
ಎಸ್.ಬಿ.ಪಿ. ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯ
ನರ್ಸಿಂಗ್ ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯ

: ದಾನ ನೀಡಬಯಸುವವರು ಸಂಪರ್ಕಿಸಿ :

1.Name of A/C : S.S.D.J.J.P.SANGHA(R.)SCHOLARSHIP FUND
2.A/C Number : 520101228383761
3.IFSC CODE : UBIN0900729
4.Bank Name : UNION BANK OF INDIA
5.Branch : SHRAVANABELAGOLA
6.Email Address : secretarysangha1982@gmail.com
7.Mobile No : 7996448066

BHIM UPI

## ಭಾರತದ ಶ್ರೀಮಂತರ ಪಟ್ಟಿಯಲ್ಲಿ ಜೈನ ಉದ್ಯೋಗಪತಿಗಳು

ಫಾರ್ಚುನ್ ನಿಯಕಾಲಿಕೆ ಪತ್ರಿಕೆಯು ಭಾರತದ ಶ್ರೀಮಂತ ಉದ್ಯೋಗಪತಿಗಳ ಹೆಸರುಗಳನ್ನು ಪ್ರಕಟಿಸಿದ್ದು, ಈ ಪಟ್ಟಿಯಲ್ಲಿ ಜೈನ ಉದ್ಯೋಗಪತಿಗಳ ಹೆಸರು ಕೂಡ ಪ್ರಕಟವಾಗಿದ್ದು, 54ನೇ ಸ್ಥಾನದಲ್ಲಿ ಗುಜರಾತಿನ ಫ್ಲೋರೊಕೆಮಿಕಲ್ಸ್, ಐನೊಕ್ಸ್ ವಿಂಡ್ ಎನರ್ಜಿ ಸಂಸ್ಥೆಯ ಶ್ರೀ ವಿವೇಕ ಜೈನ್, 92 ನೇ ಸ್ಥಾನದಲ್ಲಿ ಬೆನ್ನೆಟ್–ಕೊಲೆಮನ್ & ಟೈಮ್ಸ್ ಗ್ರೂಪ್‌ನ ಸಮೀರ ಜೈನ ಮತ್ತು ವಿನೀತ್ ಜೈನ್, 96ನೇ ಸ್ಥಾನದಲ್ಲಿ ಐನೊಕ್ಸ್ ಸಂಸ್ಥೆಯ ಪವನ್ ಜೈನ್ ಮತ್ತು ಸಿದ್ಧಾರ್ಥ್ ಜೈನ್, 153ನೇ ಸ್ಥಾನದಲ್ಲಿ ವಂಡರ್ ಸಿಮೆಂಟ್ ಸಂಸ್ಥೆಯ ಅಶೋಕ ಪಾಟ್ನಿರವರುಗಳು ಸ್ಥಾನ ಪಡೆದಿದ್ದು, ಶ್ರೀಯುತರುಗಳಿಗೆ ಕ್ಷೇತ್ರದ ವತಿಯಿಂದ ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಶುಭಾಶಿರ್ವಾದ ತಿಳಿಸಿರುತ್ತಾರೆ.


## ಧಾರ್ಮಿಕ ಜಿನ ಪದಬಂಧ–01

**ಮೇಲಿನಿಂದ ಕೆಳಕ್ಕೆ**

1) ವರ್ತಮಾನ ಕಾಲದ 2 ನೇ ತೀರ್ಥಂಕರರು (3)
2) ಭಗವಾನ್ ಮಹಾವೀರ ತೀರ್ಥಂಕರರ ತಂದೆಯ ಹೆಸರು (5)
3) ಯಕ್ಷಿ ಪದ್ಮಾವತಿ ದೇವಿಯ ಈ ಅತಿಶಯ ಕ್ಷೇತ್ರ ಶಿವಮೊಗ್ಗ ಜಿಲ್ಲೆಯಲ್ಲಿದೆ. (3)
4) ಅಷ್ಟ ಪ್ರಾತಿಹಾರ್ಯದಲ್ಲಿ ಮೊದಲನೆಯದು. (5)
6) ಘರ್ಮಾ ಎಂಬ ಒಂದು ನರಕದ 13 ಇಂದ್ರಕಗಳಲ್ಲಿ ಒಂದು (3)
8) ವಿರಾಗಿ, ಮುನಿಗಳನ್ನು ಹೀಗೂ ಕರೆಯುತ್ತಾರೆ. ತಿರುಗಿದೆ (3)
11) 28 ಮೋಹನೀಯ ಬೇದಗಳಲ್ಲಿ 9 ನೋ ಕಷಾಯಗಳಲ್ಲಿ ಒಂದು (3)
12) ಶಾಂತಿ, ಕುಂಥು, ಅರ ತೀರ್ಥಂಕರರ ಜನ್ಮ ಸ್ಥಳ (5)
13) ಭ.ಮಹಾವೀರರ ನಿರ್ವಾಣ ನಂತರ ಕೇವಲ ಜ್ಞಾನಧಾರಿಗಳಾದ ಮೂವರಲ್ಲಿ ಪ್ರಥಮ ಗಣಧರರು ತಿರುಗಿದ್ದಾರೆ. (3)
14) ಆಹಾರದ 32 ತುತ್ತುಗಳಲ್ಲಿ ಒಂದೊಂದು ತುತ್ತು ಕಡಿಮೆ ಮಾಡುತ್ತಾ ಬರುವ ಆಹಾರ ವ್ರತದ ಕ್ರಮ (5)
16) ಪಂಚೇಂದ್ರಿಯಗಳಲ್ಲಿ 6 ಬಗೆಯ ರಸಗಳನ್ನು ಗ್ರಹಿಸುವ ಇಂದ್ರಿಯ (3)
18) ಚತುರ್ದಶ ರತ್ನಗಳಲ್ಲಿ ಚಕ್ರವರ್ತಿಗೆ ಸ್ವಾಧೀನವಾಗಿರುವ, ಕತ್ತಲನ್ನು ಹೋಗಲಾಡಿಸಿ ಪ್ರಕಾಶಮಾನ ನೀಡುವ ರತ್ನ ತಿರುಗಿದೆ. (3)

**ಎಡದಿಂದ ಬಲಕ್ಕೆ**

2) ಣಮೋಕಾರ ಮಂತ್ರದಲ್ಲಿ ಸಿದ್ಧರಿಗೆ ನಮಸ್ಕಾರ ಮಾಡುವುದು ಪ್ರಾಕೃತ ಭಾಷೆಯಲ್ಲಿದೆ. (3)
4) ಈ ಪದ ಪ್ರಾಪ್ತವಾಗಲು ಅಷ್ಟ ವಿಧಾರ್ಚನೆಯಲ್ಲಿ ಭಗವಂತರಿಗೆ ಅರ್ಘ್ಯವನ್ನು ಅರ್ಪಿಸಲಾಗುತ್ತದೆ.(3)
5) ಆಚಾರ್ಯ ಉಮಾಸ್ವಾಮಿಗಳು ರಚಿಸಿದ ಮೋಕ್ಷಶಾಸ್ತ್ರದ ಮತ್ತೊಂದು ಹೆಸರು (5)
7) ಜಿನನಾಗುವ ಶಿಶುವು ಹುಟ್ಟಿದ ಕೂಡಲೆ ದೇವೇಂದ್ರನು ತನ್ನ ಪರಿವಾರದೊಂದಿಗೆ ಬಂದು ನಡೆಸುವ ಉತ್ಸವ ( 5)
9) ವೈಮಾನಿಕ ದೇವತೆಗಳ 2 ಬೇಧಗಳಲ್ಲಿ ಕಲ್ಪಾತೀತ ಒಂದಾದರೆ ಮತ್ತೊಂದು ಇದು (3)
10) ಕೇವಲಜ್ಞಾನ ಉತ್ಪತ್ತಿಯಾದಾಗ ಉಂಟಾಗುವ 10 ಅತಿಶಯಗಳಲ್ಲಿ ಒಂದು ಅಥವಾ ಅರಹಂತರು ಇದ್ದ ಗವ್ಯೂತಿ ಶತ ಚತುಷ್ಟಯದ ಭೂಭಾಗದಲ್ಲಿ ಉಂಟಾಗುವುದು (3)
12) ಮಧ್ಯಮ ಲೋಕದಲ್ಲಿರುವ 14 ಮಹಾ ನದಿಗಳಲ್ಲಿ ಒಂದು (3)
14) ಜೀವ ಪುದ್ಗಲಗಳ ನಿಲುಗಡೆಗೆ ಸಹಾಯಕ–ವಾಗುವ ಷಡ್‌ದ್ರವ್ಯಗಳಲ್ಲಿ ಒಂದು (3)
15) ಪಂಚಾಚಾರಗಳಲ್ಲಿ ಒಂದು ಅಥವಾ ಸಮ್ಯಗ್ದರ್ಶನದಲ್ಲಿ ವರ್ತಿಸುವುದು (5)
17) ಮಂಗಲಂ ಭಗವಾನ್ ವೀರೋ ಮಂಗಲಂ। ಮಂಗಲಂ ಕುಂದಕುಂದಾರ್ಯೋ ಜೈನ ಧರ್ಮೋಸ್ತು ಮಂಗಲಂ ॥ (5)
19) ವರ್ತಮಾನ ಕಾಲದ ಪುಷ್ಪದಂತ ತೀರ್ಥಂಕರರ ಲಾಂಛನ (3)
20) ಪಂಚಾಚಾರಗಳನ್ನು ಸ್ವಯಂ ಪಾಲನೆ ಮಾಡುತ್ತಾ ಬೇರೆಯವರಿಂದ ಅವುಗಳ ಪಾಲನೆ ಮಾಡಿಸುವ ಪರಮೇಷ್ಠಿಗಳು (3)




ರಚನೆ : ಎ.ಸಿ.ಇಂದಿರಾ ಜಯಕುಮಾರ್, ಶ್ರವಣಬೆಳಗೊಳ

## ಪ್ರಾಕೃತ ಭಾಷಾ ವ್ಯಾಕರಣ

ಪಾಇಯ ವಣ್ಣಮಾಲಾ (ಪ್ರಾಕೃತ ವರ್ಣಮಾಲೆ)

ಸರಾಣಿ (ಸ್ವರಗಳು)
ಅ ಆ ಇ ಈ ಉ ಊ ಎ ಓ ಅಂ

ವಗ್ಗೀಯ ವಂಜಣಾಣಿ (ವರ್ಗೀಯ ವ್ಯಂಜನಗಳು)
ಕ್ ಖ್ ಗ್ ಘ್
ಚ್ ಛ್ ಜ್ ಝ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್

ಅಣುಣಾಸಿಕಾಣಿ (ಅನುನಾಸಿಕಗಳು)
ಣ್ ನ್ ಮ್

ಅವಗ್ಗೀಯ ವಂಜಣಾನಿ (ಅವರ್ಗೀಯ ವ್ಯಂಜನಗಳು)
ಯ್ ರ್ ಲ್ ವ್ ಸ್ ಹ್

ಸಂಜುತ್ತಕ್ಖರಾಣಿ (ಸಂಯುಕ್ತಾಕ್ಷರಗಳು)

ಪ್ರಾಕೃತದಲ್ಲಿ ಸಜಾತೀಯ ವ್ಯಂಜನಗಳಿಂದಾಗುವ ಸಂಯುಕ್ತಾಕ್ಷರಗಳು ಬಳಕೆಯಲ್ಲಿವೆ. ವಿಜಾತಿಯ ವ್ಯಂಜನಾಕ್ಷರಗಳಿಂದಾಗುವ ಸಂಯುಕ್ತಾಕ್ಷರಗಳು ಬಳಕೆಯಲ್ಲಿ ಇಲ್ಲ. ಸಜಾತಿಯ ಸಂಯುಕ್ತಾಕ್ಷರಗಳು ಈ ಕೆಳಗಿನಂತಿವೆ.

ಕ್ಕ ಕ್ಖ ಗ್ಗ ಘ್ಘ
ಚ್ಚ ಚ್ಛ ಜ್ಜ ಜ್ಝ
ಟ್ಟ ಟ್ಠ ಡ್ಡ ಡ್ಢ ಣ್ಣ
ತ್ತ ತ್ಥ ದ್ದ ದ್ಧ ನ್ನ
ಪ್ಪ ಪ್ಫ ಬ್ಬ ಬ್ಭ ಮ್ಮ
ಲ್ಲ ವ್ವ ಸ್ಸ
ಣ್ಹ ಮ್ಹ ನ್ಹ ಲ್ಹ

ವಿಶೇಷತೆ : ಪ್ರಾಕೃತದಲ್ಲಿ ವಿಜಾತಿಯ ಸಂಯುಕ್ತಾಕ್ಷರಗಳಲ್ಲಿ ಅನುನಾಸಿಕ ಸಹಿತವಾದ ಈ ಕೆಲವು ಮಾತ್ರ ಬಳಕೆಯಲ್ಲಿವೆ.

## ಅಷ್ಟಮ ನಂದೀಶ್ವರ ದ್ವೀಪಕ್ಕೆ ಭೂಮಿ ಪೂಜೆ

ದರೆಗುಡ್ಡೆ. ಸೆ. 3 : ನೂತನ ಅಷ್ಟಮ ನಂದೀಶ್ವರ ದ್ವೀಪಕ್ಕೆ ಭೂಮಿ ಪೂಜೆಯನ್ನು ಮೂಡುಬಿದ್ರಿ ಶ್ರೀ ಜೈನಮಠದ ಪ.ಪೂ. ಡಾ. ಭಾರತಭೂಷಣ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕೆ. ಹೇಮರಾಜ್, ಸಂಪತ್‌ಕುಮಾರ್, ಮಂಜುನಾಥ್ ಪ್ರಸಾದ್, ಚಂಪಾವತಿ ಮತ್ತಿತ್ತರರು ಉಪಸ್ಥಿತರಿದ್ದರು.



## ಧರ್ಮ ಬಂಧುಗಳಲ್ಲಿ ವಿನಂತಿ

ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಇವರ ಮಾರ್ಗದರ್ಶನದಲ್ಲಿ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಶ್ರುತಕೇವಲಿ ಎಜುಕೇಷನ್ ಟ್ರಸ್ಟ್ (ರಿ)ನ ಸಂಚಾಲಿತ ಶ್ರೀ ಗೋಮಟೇಶ್ವರ ವಿದ್ಯಾಪೀಠ ಬ್ರಹ್ಮಚರ್ಯಾಶ್ರಮದಲ್ಲಿ ಒಟ್ಟು 35 ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ಪ್ರವೇಶ ಪಡೆದಿರುತ್ತಾರೆ. ಎಲ್ಲಾ ವಿದ್ಯಾರ್ಥಿಗಳಿಗೂ ಲೌಕಿಕ, ಧಾರ್ಮಿಕ ಶಿಕ್ಷಣ ಜೊತೆಗೆ ಭೋಜನ, ವಸತಿ, ಶಾಲಾ ಶುಲ್ಕ, ಮತ್ತು ಇತರೆ ಸೌಲಭ್ಯಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಆಸಕ್ತರು ಗುರುಕುಲ ನಿರ್ವಹಣೆಗೆ ತನು–ಮನ–ಧನದಿಂದ ದಾನ ನೀಡಬಹುದು:

ಬ್ಯಾಂಕ್ ಖಾತೆಯ ವಿವರ.
ಶ್ರೀ ಗೊಮಟೇಶ್ವರ ವಿದ್ಯಾಪೀಠ
ಖಾತೆ ಸಂಖ್ಯೆ : **54011421266**
ಐಎಫ್‌ಎಸ್‌ಸಿ : SBIN0040369
ಬ್ಯಾಂಕಿನ ಹೆಸರು :
**ಭಾರತೀಯ ಸ್ಟೇಟ್ ಬ್ಯಾಂಕ್**
ಶಾಖೆ: ಶ್ರವಣಬೆಳಗೊಳ.
ಸಂಪರ್ಕ: **9945621216** (ವ್ಯವಸ್ಥಾಪಕರು)

SCAN & PAY

## ಆಯುಷ್ ಮಂತ್ರಾಲಯ ಅಧಿಕಾರಿಗಳ ಭೇಟಿ

ಶ್ರವಣಬೆಳಗೊಳ. ಸೆ.13 : ಕೇಂದ್ರೀಯ ಆಯುರ್ವೇದ ಸಂಶೋಧನಾ ಸಂಸ್ಥೆ, ಆಯುಷ್ ಮಂತ್ರಾಲಯ ಬೆಂಗಳೂರು ಶಾಖೆಯ ಸಂಶೋಧನಾ ಅಧಿಕಾರಿ ಡಾ. ಶಶಿಧರ್ ಹೆಚ್. ದೊಡ್ಡಮನಿ ಹಾಗೂ ನವದೆಹಲಿಯ ಕೇಂದ್ರೀಯ ಆಯುರ್ವೇದ ವಿಜ್ಞಾನ ಅನುಸಂಧಾನ ಪರಿಷತ್ತಿನ ಶ್ರೀ ದಿಲೀಪ್‌ಕುಮಾರ್‌ಕರ್‌ರವರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯಲ್ಲಿ ಸಂರಕ್ಷಿಸಿರುವ ಆಯುರ್ವೇದಕ್ಕೆ ಸಂಬಂಧಿಸಿದ ಹಸ್ತಪ್ರತಿಗಳ ಸೂಚಿಯನ್ನು ಪಡೆದು ಪ್ರಕಾಶನ ಮಾಡಲು ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರೊಂದಿಗೆ ಚರ್ಚಿಸಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ನಿಪ್ಸಾರ್ ನಿರ್ದೇಶಕ ಪ್ರೊ. ಜಯಕುಮಾರ ಉಪಾಧ್ಯೆ ಉಪಸ್ಥಿತರಿದ್ದರು.



# ಕಷ್ಟ ಪರಿಹಾರಿಣೀ ಶ್ರವಣಬೆಳಗೊಳದ ಕೂಷ್ಮಾಂಡಿನಿ

ದೇಹ ತ್ಯಾಗಕ್ಕೆ ಪಾವನ ಭೂಮಿ ಎನಿಸಿದ, ಜೈನ ಶ್ರಮಣರ ಆವಾಸಕ್ಕೆ ಪವಿತ್ರ ತಾಣವೆನಿಸಿದ, ಸಲ್ಲೇಖನ ವ್ರತಕ್ಕೆ ಖ್ಯಾತಿಗಳಿಸಿದ, ಭದ್ರಬಾಹು ಮುನಿಗಳ ಪಾದ ಸ್ಪರ್ಶದಿಂದ ಪುನೀತಗೊಂಡು ಪುಣ್ಯ ಸ್ಥಳ ಎಂದೆನಿಸಿದ, ಚಂದ್ರಗುಪ್ತನಿಂದ ಮೊದಲ್ಗೊಂಡು ಮೈಸೂರಿನ ಮಹಾರಾಜರ ಕಾಲದವರೆಗೂ, ಅನೇಕ ರಾಜಮಹಾರಾಜರು ನಡೆದಾಡಿದ ಭೂಮಿಯಾದ, ರನ್ನ, ಜನ್ನರಿಂದ ಹಿಡಿದು ಇತ್ತೀಚಿನ ಕವಿಗಳವರೆಗೂ ಕ್ಷೇತ್ರದ ಪಾವನತೆಯ ಬಗ್ಗೆ ಕೊಂಡಾಡಿಸಿಕೊಂಡ, ತ್ಯಾಗ, ಅಹಿಂಸೆಯ ದ್ಯೋತಕವಾಗಿರುವ, ಅತಿತುಂಗಾಕೃತಿ ಎನಿಸಿದ ಭಗವಾನ್ ಬಾಹುಬಲಿಯ ಪಾವನ ನೆಲೆಯಾಗಿರುವ ಕಳ್ವಪ್ಪು, ಬೆಳ್ಗೊಳ, ಶ್ರವಣಬೆಳಗೊಳ ಎಂದೇ ಹೆಸರಾಗಿರುವ ಈ ಕ್ಷೇತ್ರವು ಮತ್ತೊಂದು ಅತಿಶಯದ ಕ್ಷೇತ್ರವಾಗಿದೆ ಎಂಬುದು ಹೆಚ್ಚಿನ ಜನರಿಗೆ ತಿಳಿದೇ ಇಲ್ಲ. ಶ್ರೀ ಕ್ಷೇತ್ರದಲ್ಲಿ ಎಲ್ಲಾ ರೀತಿಯ ಕಾರ್ಯಗಳು ಸುಗಮವಾಗಿ, ಸ್ವಚ್ಛಂದವಾಗಿ ಸಾಗಲು ಆ ಒಂದು ಅತಿಶಯ ಶಕ್ತಿಯೇ ಕಾರಣವಾಗಿರುವುದನ್ನು ಅರಿತವರು ಮಾತ್ರ ಕೆಲವೇ ಮಂದಿ. ಅಂತಹ ಅತಿಶಯಕ್ಕೆ ಕಾರಣವಾಗಿರುವ ಮಹಾಶಕ್ತಿಯೇ ಇಲ್ಲಿನ ಶಕ್ತಿದೇವತೆ ಮಾತೆ ಶ್ರೀ ಕೂಷ್ಮಾಂಡಿನಿ. ಅಂಬಿಕಾ, ಅಂಬಾಯಿ, ಅಂಬಾ, ಅಂಬಿಕಾದೇವಿ, ಆಮ್ರ, ಕೂಷ್ಮಾಂಡಿನಿ ಎಂದು ಕರೆಯಲ್ಪಡುವ ಈ ಶಕ್ತಿದೇವತೆಯು ಜೈನರ 22ನೇ ತೀರ್ಥಂಕರಾದ ನೇಮಿನಾಥರ ಯಕ್ಷಿಯಾಗಿದ್ದಾಳೆ.'ಜಿನಶಾಸನ ರಕ್ಷಾದೇವಿ' ಎಂದೇ ಪುರಾಣಗಳಲ್ಲಿ, ಶಾಸನಗಳಲ್ಲಿ ಉಲ್ಲೇಖಿಸಲ್ಪಡುವ ಅರ್ಹತ್ ಪರಿವಾರ ದೇವತೆಗಳಲ್ಲಿ ಒಬ್ಬಳಾಗಿದ್ದಾಳೆ.

**ಸಮೃದ್ಧಿ ದೇವತೆ ಕೂಷ್ಮಾಂಡಿನಿ**

ಪರಂಪರೆಯಿಂದ ಕೂಷ್ಮಾಂಡಿನಿ ದೇವಿಯನ್ನು ಭೌತಿಕ ಸಮೃದ್ಧಿಯನ್ನು ನೀಡುವ, ಸಂತಾನ ಫಲವನ್ನು ನೀಡುವ, ಮಹಿಳೆಯರನ್ನು ರಕ್ಷಿಸುವ ಪೋಷಕ ದೇವತೆ ಎಂದು ಪ್ರಸಿದ್ಧಿ ಪಡೆದಿದ್ದಾಳೆ. ಪ್ರಕೃತಿಯಲ್ಲಿನ ದುಷ್ಟ ಶಕ್ತಿಗಳಿಂದ ರಕ್ಷಿಪ ಮಾತೆ ಎಂದು ಕರೆಯಲಾಗುತ್ತದೆ. ಅಂಬಿಕಾ ದೇವಿ ಅಂದರೆ ಕೇಳಿದ್ದನ್ನು ನೀಡುವ, ಕಾಮಿತ ಫಲಗಳನ್ನು ಕರುಣಿಸುವ, ಕಷ್ಟಗಳನ್ನು ಪರಿಹರಿಸಿ, ಸುಖ ಸಮೃದ್ಧಿ ನೀಡುವ ದೇವಿ ಎಂದೇ ಪ್ರಸಿದ್ಧಿ ಪಡೆದಿದ್ದಾಳೆ.

ಅಂಬಿಕಾ ದೇವಿಯ ಮೂಲ ಸ್ಥಾನ ಗುಜರಾತಿನ ಗಿರಿನಗರ ವಾದರೂ, ದಕ್ಷಿಣ ಭಾರತದಲ್ಲಿ ಈಕೆ ಜಿನಶಾಸನ ದೇವತೆಯಾಗಿ, ನೇಮಿನಾಥರ ಯಕ್ಷಿಯಾಗಿ, ತಮಿಳುನಾಡಿನಲ್ಲಿ ಧರ್ಮದೇವಿಯಾಗಿ, ಕರ್ನಾಟಕದಲ್ಲಿ ಕೂಷ್ಮಾಂಡಿನಿಯಾಗಿ ಪೂಜಿಸಲ್ಪಡುತ್ತಾಳೆ. ಕೂಷ್ಮಾಂಡಿನಿಯ ವಿಗ್ರಹಗಳನ್ನು ಗಮನಿಸಿದಾಗ ಅವಳು ಅರಿಷ್ಟನೇಮಿಯ ಪಾದ ಮೂಲದಲ್ಲಿದ್ದಾಗ ಅಷ್ಟಭುಜೆಯಾಗಿ, ಸಿಂಹಾಸನದ ಮೇಲಿದ್ದಾಗ ಚತುರ್ಭುಜೆಯಾಗಿ, ತೀರ್ಥಂಕರರ ಬಿಂಬದ ಬಳಿ ಇದ್ದಾಗ ದ್ವಿಭುಜೆಯಾಗಿ ವಿಶೇಷವಾಗಿ ಕಂಡು ಬರುತ್ತಾಳೆ. ಅಷ್ಟಭುಜೆಯಲ್ಲಿದ್ದಾಗ ಶಂಖ, ಚಕ್ರ, ದನುಷ್, ತೋಮರ, ಖಡ್ಗ, ಪಾಶ, ವರದ, ಕೌಕ್ಷೇಯವನ್ನು, ಚತುರ್ಭಜೆಯಲ್ಲಿದ್ದಾಗ ಶಂಖ, ಚಕ್ರ, ವರದ, ಪಾಶಗಳೆಂಬ ಆಯುಧಗಳನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ದಕ್ಷಿಣ ಭಾರತದ ದಿಗಂಬರ ಜೈನ ಪರಂಪರೆಯಲ್ಲಿ ಸರ್ವಾಹ್ಣ ಯಕ್ಷನೊಂದಿಗೆ ಕೂಷ್ಮಾಂಡಿನಿಯನ್ನು ಜೋಡಿಯಾಗಿ ತೀರ್ಥಂಕರರ ಅಕ್ಕಪಕ್ಕದಲ್ಲಿ ಚಿತ್ರಿಸಲಾಗಿದೆ.

**ಕೂಷ್ಮಾಂಡಿನಿಯನ್ನು ಕುಲದೇವತೆಯಾಗಿ ಪೂಜಿಸುವ ಪದ್ಧತಿ ರೂಢಿಯಲ್ಲಿದೆ.**

ಕರ್ನಾಟಕದ ಶ್ರವಣಬೆಳಗೊಳ, ಸ್ವಾಧಿ, ನಲ್ಲೂರು, ಮೂಢಬಿದರೆ ಕ್ಷೇತ್ರ ಸೇರಿದಂತೆ ಹಲವೆಡೆಗಳಲ್ಲಿ ಕೂಷ್ಮಾಂಡಿನಿಯನ್ನು ಆರಾಧಿಸುತ್ತಾರೆ. ಶ್ರವಣಬೆಳಗೊಳವು ಕೂಷ್ಮಾಂಡಿನಿಯ ಪರಮ ಆರಾಧನಾ ಸ್ಥಳವಾಗಿದೆ. ಬೆಳಗೂಳದ 'ರಕ್ಷಾದೇವತೆ' ಎಂದು ಪ್ರಸಿದ್ಧಳಾಗಿದ್ದಾಳೆ.

ಶ್ರವಣಬೆಳಗೊಳಕ್ಕೆ ಉತ್ತರ ಭಾರತದ ಹಲವಾರು ಜೈನಮುನಿಗಳು ಸಮಾಧಿ ಮರಣ ಹೊಂದಲು, ತಪ ಸಾಧನೆ ಮಾಡಲು ಇಲ್ಲಿ ಹೆಚ್ಚು ಕಾಲ ಇರುತ್ತಿದ್ದರಿಂದ ಅವರ ರಕ್ಷಕ ದೇವತೆಯಾಗಿ ಕೂಷ್ಮಾಂಡಿನಿ ಇಲ್ಲಿ ನೆಲಸಿ, ಪ್ರಕೃತಿಯ ದುಷ್ಟ ಶಕ್ತಿಗಳಿಂದ ರಕ್ಷಣೆ, ಕ್ಷೇತ್ರ ರಕ್ಷಣೆ, ಸಾಧುಗಳ ರಕ್ಷಣೆಯಲ್ಲಿ ಪ್ರಭಾವ ಬೀರಿದಳೆಂದು ಹೇಳಲಾಗಿದೆ. ಮುನಿಗಳ ತಪ ಸಾಧನೆಗೆ ಯಾವುದೇ ಅಡೆತಡೆಯಾಗದಂತೆ, ಜನರಿಗೆ ತೊಂದರೆಯಾಗದಂತೆ ಸಮೃದ್ಧಿ ನೀಡಿ, ಕ್ಷೇತ್ರ ರಕ್ಷಕಿಯಾಗಿ ಕಾಪಾಡಿದಳು. ಹಾಗಾಗಿ ಇಲ್ಲಿ ನೆಲಸಿದ್ದ ಜೈನರು ಮತ್ತು ಜೈನೇತರರು ಕ್ಷೇತ್ರದ ಅಧಿದೇವತೆಯಾದ ಕೂಷ್ಮಾಂಡಿನಿ ದೇವಿಯನ್ನು ಭಕ್ತಿಯಿಂದ ಪೂಜಿಸುವ ಪರಂಪರೆ ಬೆಳೆದು ಬಂದಿದೆ.

ಶ್ರವಣಬೆಳಗೊಳದ ಮೂಲ ನಿರ್ಮಾತೃಗಳಲ್ಲಿ ಗಂಗರಾಜ ಮತ್ತು ಅವನ ಅತ್ತಿಗೆ ಜಕ್ಕಿಯಬ್ಬೆಯು ಕಾರ್ಯವನ್ನು ಎಂದಿಗೂ ಮರೆಯಲಾಗದು. ಜಕ್ಕಿಯಬ್ಬೆ ಶ್ರವಣಬೆಳಗೊಳದ ಜನರ ಅಭಿವೃದ್ಧಿಗಾಗಿ ಹೊಸಹಳ್ಳಿ ಸಮೀಪ ಒಂದು ಕೆರೆಯನ್ನು ಗಂಗರಾಜನ ಒಡಗೂಡಿ ನಿರ್ಮಿಸುತ್ತಾಳೆ. ಇದನ್ನು ಜಕ್ಕಿಕಟ್ಟೆ, ಗಂಗ ಸಮುದ್ರ ಎಂದು ಕರೆಯಲಾಗುತ್ತದೆ. ಆ ಸಂದರ್ಭದಲ್ಲಿ ಕೆರೆಯ ಸಮೀಪ ದಕ್ಷಿಣಕ್ಕೆ ಇದ್ದ ಹೆಬ್ಬಂಡೆಯ ಮೇಲೆ ನೇಮಿನಾಥರ ಜಿನಬಿಂಬ ಬಲಭಾಗದಲ್ಲಿ ಕೂಷ್ಮಾಂಡಿನಿ ದೇವಿ, ಎಡಭಾಗದಲ್ಲಿ ಸರ್ವಾಹ್ಣ ಯಕ್ಷನ ಉಬ್ಬು ಶಿಲ್ಪ ಕೆತ್ತಿಸಿ ಗುಡಿ ನಿರ್ಮಿಸುತ್ತಾಳೆ. ಇಲ್ಲಿರುವ ಕೂಷ್ಮಾಂಡಿನಿ ಬಲಭಾಗದಲ್ಲಿ ಇದ್ದು ಕ್ಷೇತ್ರ ಮತ್ತು ಜನರಿಗೆ ಬಂದ ಕಷ್ಟ ಕಳೆಯಲು ಶಕ್ತಿಯಾಗಿ ಹರಸುವ ವಿಶೇಷತೆ ಹೊಂದಿದ್ದಾಳೆ. ಈಗಿನ ಮಠದ ಬಸದಿ ನಿರ್ಮಾಣ ಮಾಡಿದ ನಂತರ ಮತ್ತೊಂದು ಕೂಷ್ಮಾಂಡಿನಿ ದೇವಿಯ ನೂತನ ವಿಗ್ರಹ ಸ್ಥಾಪನೆ ಮಾಡಲಾಗಿದೆ. ಕೂಷ್ಮಾಂಡಿನಿ ದೇವಿಯ ಮೂಲ ಸ್ಥಾನ ಇದು ಆಗಿದ್ದು ಇದನ್ನು ಜಕ್ಕಿಯಬ್ಬೆ ನಿರ್ಮಾಣ ಮಾಡಿಸಿದ್ದರಿಂದ ಜಕ್ಕಳಮ್ಮನ ಗುಡಿ ಎನ್ನಲಾಗುತ್ತದೆ. ಜಕ್ಕಿ ಎಂದರೆ ಯಕ್ಷಿ ಎಂದು ಅರ್ಥೈಸುವುದರಿಂದ ರೂಢಿಯಲ್ಲಿ ಜಕ್ಕಳಮ್ಮ ಎಂದೇ ದೇವಿಯನ್ನು ಕರೆಯಲಾಗುತ್ತದೆ. ಇಲ್ಲಿ ಹರಕೆ ಹೊರುವುದರಿಂದ ನಾಡಿಗೆ ಬಂದ ಕಷ್ಟ ಪರಿಹಾರ–ವಾಗುತ್ತದೆ ಎಂಬ ನಂಬಿಕೆ ಹಿಂದಿನಿಂದಲೂ ಇದೆ. 2017ರಲ್ಲಿ ಮಳೆ ಇಲ್ಲದೆ ಕೆರೆ ಬರಿದಾಗಿ ನೀರಿಗೆ ತೊಂದರೆಯಾಗಿದ್ದಾಗ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ದೇವಿಗೆ ಹರಕೆ ಹೊತ್ತು ಪ್ರಾರ್ಥಿಸಿದ ಕೆಲವೇ ದಿನಗಳಲ್ಲಿ ಸಮೃದ್ಧವಾಗಿ ಮಳೆ ಬಂದು ಕೆರೆ ತುಂಬಿ ಹರಿಯಿತು. ಆಗ ಸ್ವಾಮೀಜಿ ಅವರು ಮೂರು ಕಿ.ಮಿ.ಕಾಲ್ನಡಿಗೆಯಲ್ಲಿ ಹರಕೆ ಮುಡಿ ಹೊತ್ತು ಎಲ್ಲಾ ಸಮುದಾಯದ ಜನರೊಂದಿಗೆ ಮೆರವಣಿಗೆಯಲ್ಲಿ ಸಾಗಿ ಹರಕೆ ಸಲ್ಲಿಸಿದರು. ಬೆಳಗೂಳದ ರಥೋತ್ಸವ ಸಂದರ್ಭದಲ್ಲಿ ಇಲ್ಲಿನ ದೇವಿಗೆ ಪ್ರಾರ್ಥನೆ ಸಲ್ಲಿಸಿ, ಪ್ರಸಾದ ಮತ್ತು ಅಪ್ಪಣೆ ಪಡೆದ ನಂತರ ಉಳಿದ ಧಾರ್ಮಿಕ ವಿಧಿಗಳು ನಡೆಯುತ್ತವೆ. ಹಾಗಾಗಿ ಇಲ್ಲಿನ ಕೂಷ್ಮಾಂಡಿನಿ ದೇವಿಯನ್ನು ಕಷ್ಟ ಪರಿಹಾರಿಣೀ, ಸಮೃದ್ಧಿ ಸಂಕೇತ ಮಾತೆ, ಸಂತಾನವೃದ್ಧಿ ದೇವಿ ಎಂದು ಕರೆಯಲಾಗುತ್ತದೆ. ಇಲ್ಲಿ ಭಕ್ತರು ಬಂದು ತಮ್ಮ ಕಷ್ಟ ನಿವಾರಣೆಗಾಗಿ ಭಕ್ತಿಯಿಂದ ಹರಕೆ ಹೊತ್ತು ಪೂಜೆ ಸಲ್ಲಿಸಿದ ನಂತರ ಶ್ರೀ ಮಠದಲ್ಲಿನ ಕೂಷ್ಮಾಂಡಿನಿ ದೇವಿಗೆ ಅಭಿಷೇಕ ಮಾಡಿಸಿ ಷೋಡಶೋಪಚಾರವನ್ನು ಮಾಡುವುದರಿಂದ ಎಲ್ಲಾ ರೀತಿಯ ಕಷ್ಟಗಳು ನಿವಾರಣೆಯಾಗಿ ಸುಖ ಸಮೃದ್ಧಿಯನ್ನು ನೀಡುತ್ತಾಳೆ ಎಂಬ ನಂಬಿಕೆ ಇದ್ದು, ದೇವಿಯ ಪ್ರಾರ್ಥನೆ ಮಾಡಿ ಕಷ್ಟ ಪರಹರಿಸಿಕೊಂಡವರು ಈಗಲೂ ಕ್ಷೇತ್ರಕ್ಕೆ ಬಂದು ಮಂಗಳವಾರ ವಿಶೇಷ ಪೂಜೆ ಮಾಡುವ ರೂಢಿ ಇದೆ. ಬಹುದೂರದಿಂದಲೂ ಜನರು ಇಲ್ಲಿಗೆ ಆಗಮಿಸಿ ದೇವಿಯ ದರ್ಶನ ಪಡೆಯುತ್ತಿದ್ದಾರೆ. ಗಂಗರ ಚಾವುಂಡ–ರಾಯನಿಂದ ಮೊದಲ್ಗೊಂಡು ಹೊಯ್ಸಳ ದಂಡನಾಯಕ ಗಂಗರಾಜ, ಭಂಡಾರಿ ಹುಳ್ಳ, ಜಕ್ಕಿಯಬ್ಬೆ, ಲಕ್ಷ್ಮಮತಿ, ಪೋಚಿಕಬ್ಬೆ, ಎಚಿರಾಜ ಸೇರಿದಂತೆ ಮೈಸೂರಿನ ಅರಸವರೆಗೂ, ಜೈನಾಚಾರ್ಯರಾದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು, ಶುಭಚಂದ್ರ ಸಿದ್ಧಾಂತಿಗಳು, ಚಾರುಕೀರ್ತಿ ಪಂಡಿತಾಚಾರ್ಯರು, ಹಲವಾರು ಮಠಾಧಿಪತಿಗಳು, ಕರ್ಮಯೋಗಿ ಚಾರುಕೀರ್ತಿ ಸ್ವಾಮೀಜಿಗಳು ಸೇರಿದಂತೆ ಎಲ್ಲರಿಂದ ಅಪಾರ ನಂಬಿಕೆ ಮತ್ತು ಭಕ್ತಿಯಿಂದ ಪೂಜೆಗೊಳ್ಳುತ್ತಿರುವ ದೇವತೆ ಕೂಷ್ಮಾಂಡಿನಿಯು ಎಲ್ಲರಿಗೂ ಸಮೃದ್ಧಿಯನ್ನು ನೀಡುವ ದೇವಿ ಎನಿಸಿದ್ದಾಳೆ. ಬೆಳಗೂಳದ ಅಧಿದೇವತೆಯಾಗಿ ಇಲ್ಲಿಗೆ ಬಂದು ಪ್ರಾರ್ಥಿಸುವ ಸಕಲರನ್ನು ಸಲಹುವ ದೇವಿಯಾಗಿದ್ದಾಳೆ. ಪೋಷಕ ದೇವತೆ, ಸಮೃದ್ಧಿ ದೇವತೆ ಎಂದೇ ಹೆಸರಾಗಿದ್ದಾಳೆ.

– ಲೇಖನ : ವೀರೇಂದ್ರ ಬೇಗೂರು.

## ಅಭಿನಂದನೆಗಳು



**ಅನುರಾಧ ಬಿ. ದೇಸಾಯಿ**

(ದಿ. ಶ್ರೀ ತಿಪ್ಪನಗೌಡ ಹಾಗೂ ಶ್ರೀಮತಿ ಶಾಂತಮತಿ ಪಾಟೀಲ, ರಾಯಚೂರು ಇವರ ಜ್ಯೇಷ್ಠ ಸುಪುತ್ರಿ)

ಇವರು ಬೆಂಗಳೂರಿನ ಇಸ್ರೋ ಬಾಹ್ಯಾಕಾಶ ಸಂಸ್ಥೆಯ ಯು.ಆರ್. ರಾವ್ ಸೆಟಲೈಟ್ ಸೆಂಟರ್‌ನಲ್ಲಿ Telemetry and Data Acquisition System Divison ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದು, ಚಂದ್ರಯಾನ–3 ಯಶಸ್ಸಿನಲ್ಲಿ ಇವರ ಕೊಡುಗೆ ಇರುತ್ತದೆ.

ಇವರಿಗೆ ಶುಭಕೋರುವವರು : ತಾಯಿ ಶ್ರೀಮತಿ ಶಾಂತಮತಿ ಪಾಟೀಲ್ ರಾಯಚೂರು, ಪತಿ ಬಾಹುಬಲಿ ಜೆ. ದೇಸಾಯಿ, ಮಾವ ಜಿನದತ್ತ ದೇಸಾಯಿ, ಸಹೋದರಿ ಪದ್ಮ ದೇವಕುಮಾರ್, ಮಕ್ಕಳಾದ ಅನುಷಾ, ಆಯುಷಾ, ದಿವ್ಯ,
ಅಳಿಯ ಸಂಕೇತ ದರಗಶೆಟ್ಟಿ
ಮೊಮ್ಮಗಳು ಧ್ರಿತಾ ದರಗಶೆಟ್ಟಿ

## ಹೃತ್ಪೂರ್ವಕ ಅಭಿನಂದನೆಗಳು



**ಡಾ। ನೈದಿಲ ಸಾಕೇತ ಶೆಟ್ಟಿ**

"ಧರ್ಮ", ವನಸಿರಿ ನಗರ, ಸತ್ತೂರ, ಧಾರವಾಡ

ಡಾ ನೈದಿಲ ಸಾಕೇತ ಶೆಟ್ಟಿ ಇವರು ಮನೋವೈದ್ಯಕೀಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ರಾಜೀವ ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯದಿಂದ 7ನೇಯ ರ್‍ಯಾಂಕ್ ಪಡೆದಿರುವ ಇವರಿಗೆ ಅಭಿನಂದನೆಗಳು.



ಶುಭ ಕೋರವವರು:

| | |
|---|---|
| ಶ್ರೀ ರತ್ನಾಕರ್ ಜೈನ್ ಹಾಗೂ | ಡಾ. ನಿರಂಜನ್ ಕುಮಾರ ಹಾಗೂ |
| ಶ್ರೀಮತಿ ಶೈಲಿನಿ ಜೈನ್ | ಶ್ರೀಮತಿ ಪದ್ಮಲತಾ ನಿರಂಜನ್ |
| ಮತ್ತು ಡಾ। ಸ್ಪರ್ಧಾ ಜೈನ್, ಮಂಗಳೂರು | ಮತ್ತು ಶ್ರೀ. ಸಾಕೇತ ಶೆಟ್ಟಿ, ಧಾರವಾಡ |



## ತರಬೇತಿ ಕಾರ್ಯಾಗಾರ

**ದಾವಣಗೆರೆ. ಸೆ. 3 :** ಪದ್ಮಾಂಬ ಮಹಿಳಾ ಸಮಾಜದ ವತಿಯಿಂದ ಶ್ರೀ 1008 ಕಲ್ಪಧ್ರುಮ ಆದಿನಾಥ ಬಸದಿಯಲ್ಲಿ ಒಳಾಂಗಣ ಅಲಂಕಾರಿಕ ಸಸಿಗಳ ಪೋಷಣೆ ಹಾಗೂ ನಿರ್ವಹಣೆ ಬಗ್ಗೆ ತರಬೇತಿ ಕಾರ್ಯಾಗಾರ ನಡೆಯಿತು. ಈ ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷೆ ವರ್ಷಾ ಸುಧೀರ ಹೂಲಿ, ಉಷಾ ಜೈಪ್ರಕಾಶ್, ಚೇತನಾ ಪದ್ಮರಾಜ, ದೀಪಾ ಬೇತೂರ, ಹರ್ಷ ನಾಗರಾಜ, ಸೌಮ್ಯ ಉಪಸ್ಥಿತರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ



**ಧರ್ಮಭೂಷಣ ಶ್ರೀ ಹೆಚ್.ಪಿ. ಸುದರ್ಶನ**

ಪಾಯಣ್ಣ ಅಂಡ್ ಸನ್ಸ್

ಜನನ 09–06–1944 ನಿಧನ : 29–08–2023

ಶ್ರೀ ಹೆಚ್.ಪಿ. ಸುದರ್ಶನ್‌ರವರು ಹಾಸನದ ಶ್ರೀ ಮಹಾವೀರ ಎಜುಕೇಶನ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾಗಿ, ಮಹಾವೀರ ಭವನ ನಿರ್ಮಾಣ ಕಾರ್ಯದಲ್ಲಿ ಅಪಾರ ಕಾರ್ಯ ನಿರ್ವಹಿಸಿರುತ್ತಾರೆ. ಎಂ. ಕೃಷ್ಣ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿಗಳಾಗಿ ಛೇಂಬರ್ ಆಫ್ ಕಾಮರ್ಸ್, ಜೆ.ಸಿ. ಕ್ಲಬ್, ಜೈನ್ ಮಿಲನ್, ವಿಶ್ವಹಿಂದೂ ಪರಿಷತ್ ಹಾಗೂ ಹಲವಾರು ಸಂಘ ಸಂಸ್ಥೆಗಳ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ಇವರು ಸದಾಕಾಲ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ನಿರತರಾಗಿದ್ದು, ಎಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದು, ಜೈನ ಸಮಾಜದ ಗೌರವಾನ್ವಿತ ಶ್ರಾವಕರಾಗಿದ್ದರು. ಇವರ ಆದರ್ಶ ಜೀವನವು ನಮಗೊಂದು ಬೆಳಕಾಗಿದೆ.
ನೀವು ತೋರಿದ ಬೆಳಕಿನ ಹಾದಿಯಲ್ಲಿ ಮುನ್ನಡೆಯುತ್ತೇವೆ.
ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುವ
ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಗ ಹಾಗೂ ಬಂಧು–ಮಿತ್ರರು

## ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ



**ಬೆಂಗಳೂರು :** ದೆಹಲಿ ಪಬ್ಲಿಕ್ ಶಾಲೆಯ (ಸಿಬಿಎಸ್‌ಇ) ಕು. ದಿಶಾ ಕಣ್ಮುಸೆರವರು (ತಂದೆ : ಧರ್ಮಪಾಲ್, ತಾಯಿ:ಶಿಲ್ಪಾ) ಶೇ. 95.04 ಅಂಕಗಳನ್ನು ಪಡೆದಿದ್ದಾರೆ.

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಬೈರಗೌಡಾ ಮಲಗೌಡಾ ಪಾಟೀಲ**

ಭೋಜ, ತಾ. ನಿಪ್ಪಾಣಿ, ಜಿ. ಬೆಳಗಾವಿ

ನಿಧನ : 18–08–2023

ಕಳೆದ ಐವತ್ತು ವರ್ಷಗಳಿಂದ ಸಮ್ಮೇದ ಶಿಖರ್ಜಿ, ಶ್ರವಣಬೆಳಗೊಳ ಹಾಗೂ ಇನ್ನಿತರ ಅನೇಕ ಕ್ಷೇತ್ರ ದರ್ಶನ ಮಾಡಿರುತ್ತಾರೆ ಮತ್ತು ಇತರರಿಗೂ ಸಹ ಕ್ಷೇತ್ರಗಳ ದರ್ಶನ ಮಾಡಿಸಿ ಪುಣ್ಯಭಾಗಿಗಳಾಗಿರುತ್ತಾರೆ.

ದುಃಖ ಭಾಗಿಗಳು : ಮಗ, ಮಗಳು, ಅಳಿಯ, ಮೊಮ್ಮಕ್ಕಳು ಹಾಗೂ ಬಂಧು–ಬಳಗ

## ಅಂತರರಾಷ್ಟ್ರೀಯ ಪ್ರಶಸ್ತಿ

**ಮೈಸೂರು. ಸೆ. 3 :** ಅತಿ ಹಿಂದುಳಿದ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮೈಸೂರಿನ ಡಾ. ಪದ್ಮಾ ಧನ್ಯಕುಮಾರ್‌ರವರ ಸಾಮಾಜಿಕ ಸೇವೆಯನ್ನು ಗುರುತಿಸಿ ಏಷ್ಯಾ ಇಂಟರ್‌ನ್ಯಾಷನಲ್ ಕಲ್ಚರ್ ರಿಸರ್ಚ್ ಯುನಿವರ್ಸಿಟಿಯಿಂದ ಇಂಟರ್‌ನ್ಯಾಷನಲ್ ಎಕ್ಸಲೆನ್ಸ್ ಗೋಲ್ಡ್ ಸ್ಟಾರ್ ಪ್ರಶಸ್ತಿಯನ್ನು ಇತ್ತೀಚೆಗೆ ಕೊಡಮಾಡಲಾಗಿದೆ.



॥ ಶ್ರೀ ವೀತರಾಗಾಯ ನಮಃ ॥ ॥ ಶ್ರೀ ಗೋಮಟೇಶಾಯ ನಮಃ ॥





# ಆಹ್ವಾನ ಪತ್ರಿಕೆ

ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಪ್ರತಿವರ್ಷದಂತೆ

## ದಶಲಕ್ಷಣ (ಪರ್ಯೂಷಣ) ಪರ್ವ ಹಾಗೂ ಕಲ್ಪದ್ರುಮ ಮಹಾಭಿಷೇಕ ಪೂಜಾ ಕಾರ್ಯಕ್ರಮ



ಧರ್ಮಬಂಧುಗಳೇ,

ಅಂತಿಮ ಶ್ರುತಕೇವಲಿ ಆಚಾರ್ಯಶ್ರೀ ಭದ್ರಬಾಹು ಸ್ವಾಮಿ ಹಾಗೂ ಮೌರ್ಯ ಸಾಮ್ರಾಟ್ ಚಂದ್ರಗುಪ್ತರ ಸಲ್ಲೇಖನ ಪೂರ್ವಕ ಸಮಾಧಿಯಿಂದ ಪ್ರಸಿದ್ಧ ಪುಣ್ಯ ಕ್ಷೇತ್ರ ಚಂದ್ರಗಿರಿ ಹಾಗೂ ಉತ್ತುಂಗ ಭವ್ಯ **ಗೋಮಟೇಶ್ವರ ಭ. ಶ್ರೀ ಬಾಹುಬಲಿ ಸ್ವಾಮಿ**ಯ ಪ್ರತಿಮೆ ಶೋಭಿತ ಅತಿಶಯ ಕ್ಷೇತ್ರ ಶ್ರೀ ವಿಂಧ್ಯಗಿರಿಗಳಿಂದ ಸುಶೋಭಿತ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ **ಪರಮಪೂಜ್ಯ ಸಮಸ್ತ ಸಾಧು ವೃಂದದ ಸಾನ್ನಿಧ್ಯ** ಹಾಗೂ **ಪೂಜ್ಯ ಶ್ರೀಮದಭಿನವ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ**ಯವರ ನೇತೃತ್ವದಲ್ಲಿ ಶೋಭಕೃತ್ ನಾಮ ಸಂವತ್ಸರ ಭಾದ್ರಪದ ಮಾಸ ಪಂಚಮಿಯ **ದಿನಾಂಕ:20-09-2023ರ ಬುಧವಾರದಿಂದ ಪೂರ್ಣಿಮಿ ದಿನಾಂಕ : 29-09-2023ರ ಶುಕ್ರವಾರ**ದವರೆಗೆ ಸಮಸ್ತ ಭವ್ಯ ಜನರ ಆತ್ಮಕಲ್ಯಾಣಕ್ಕೆ ಕಾರಣವಾಗುವ **ದಶಲಕ್ಷಣ ಪರ್ಯೂಷಣ ಪರ್ವ**ವು ಆಯೋಜಿತಗೊಂಡಿದ್ದು, ಈ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಅಭಿಷೇಕ, ತತ್ವಾರ್ಥ ಸೂತ್ರ ಸ್ವಾಧ್ಯಾಯ, ಸಮಸ್ತ ತ್ಯಾಗಿಗಳಿಂದ ಪ್ರವಚನ, ಆರತಿ ಕಾರ್ಯಕ್ರಮಗಳು ಸಂಪನ್ನಗೊಳ್ಳಲಿವೆ.

**ಧರ್ಮಬಂಧುಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪುಣ್ಯಭಾಗಿಗಳಾಗಬೇಕಾಗಿ ವಿನಂತಿ.**

### ಕಾರ್ಯಕ್ರಮಗಳು

**ಪ್ರತಿ ದಿನ ಬೆಳಗ್ಗೆ 07.30 ಕ್ಕೆ : ಭಂಡಾರಿ ಬಸದಿಯ ಚತುರ್ವಿಂಶತಿ ತೀರ್ಥಂಕರರಿಗೆ ಕಲ್ಪದ್ರುಮ ಮಹಾಭಿಷೇಕ ಪೂಜೆ.**

**ಮಧ್ಯಾಹ್ನ 01.30 ಕ್ಕೆ : ಚಾವುಂಡರಾಯ ಸಭಾ ಮಂಟಪದ ಸಮವಸರಣ ಮಂದಿರದಲ್ಲಿ ಅರಿಹಂತ ಪರಮೇಷ್ಠಿಗಳ ಹಾಗೂ ಮಾತೆ ಜಿನವಾಣಿ ಅಷ್ಟವಿಧಾರ್ಚನೆ ಪೂಜೆ, ತತ್ವಾರ್ಥ ಸೂತ್ರ ವಾಚನ ಮತ್ತು ಅರ್ಥ ವಿವರಣೆ ಹಾಗೂ ಪೂಜ್ಯ ತ್ಯಾಗಿಗಳಿಂದ ಮಂಗಲ ಪ್ರವಚನ.**

**ರಾತ್ರಿ 07.00 ಕ್ಕೆ : ಚಾವುಂಡರಾಯ ಸಭಾ ಮಂಟಪದ ಸಮವಸರಣ ಮಂದಿರದಲ್ಲಿ ಧಾರ್ಮಿಕ ಪ್ರಶ್ನೋತ್ತರ ಹಾಗೂ ಸಂಗೀತಮಯ ಆರತಿ ಕಾರ್ಯಕ್ರಮ.**

**ದಿನಾಂಕ : 27-09-2023 ರಿಂದ 29-09-2023ರವರೆಗೆ**

ಶ್ರೀಮದನಂತನಾಥ ನೋಂಪಿ ವ್ರತ ಸಂಪನ್ನಗೊಳ್ಳಲಿದೆ.

**ದಿನಾಂಕ : 01-10-2023ರ ಭಾನುವಾರ**

**ಕ್ಷಮಾವಾಣಿ ಹಾಗೂ ಸಹಸ್ರಕೂಟ ಜಿನಬಿಂಬ ಮಹಾಭಿಷೇಕ ಪೂಜೆ**

ಸಂಗೀತ : ಶ್ರೀ ಕುಬೇರ ಚೌಗುಲೆ, ಉದಗಾಂವ್

### ಸರ್ವರಿಗೂ ಹಾರ್ದಿಕ ಸುಸ್ವಾಗತ

| ಕಾರ್ಯಕ್ರಮ ಆಯೋಜಕರು | ಅಧ್ಯಕ್ಷರು ಮತ್ತು ಸದಸ್ಯರು | ಅಧ್ಯಕ್ಷರು ಮತ್ತು ಸದಸ್ಯರು |
| --- | --- | --- |
| ಎಸ್‌ಡಿಜೆಎಂಐಎಂಸಿ ಟ್ರಸ್ಟ್ (ರಿ) | ಶ್ರೀ ದಿಗಂಬರ ಜೈನ ಸಮಾಜ | ಶ್ರೀ ಕೂಷ್ಮಾಂಡಿನಿ ಮಹಿಳಾ ಸಮಾಜ |
| ಶ್ರೀಕ್ಷೇತ್ರ ಶ್ರವಣಬೆಳಗೊಳ | ಶ್ರೀಕ್ಷೇತ್ರ ಶ್ರವಣಬೆಳಗೊಳ | ಶ್ರೀಕ್ಷೇತ್ರ ಶ್ರವಣಬೆಳಗೊಳ |

ವಿಶೇಷ ಸೂಚನೆ : **ಶ್ರೀಮದನಂತನಾಥ ನೋಂಪಿ ವ್ರತಿಕರು ತಮ್ಮ ಹೆಸರನ್ನು ನೋಂದಾಯಿಸುವುದು. ನೋಂಪಿಯಲ್ಲಿ ಭಾಗಿಯಾಗುವ ವ್ರತಿಕರಿಗೆ ಶುದ್ಧ ಭೋಜನದ ವ್ಯವಸ್ಥೆ ಇರುತ್ತದೆ.**

## ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯಲ್ಲಿ ಮಾಸಿಕ ಉಪನ್ಯಾಸ

ಶ್ರವಣಬೆಳಗೊಳ. ಆ. 25 : ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಬಾಹುಬಲಿ ಪ್ರಾಕೃತ ವಿದ್ಯಾಪೀಠದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯಲ್ಲಿ ಹತ್ತನೆಯ ಮಾಸಿಕ ಉಪನ್ಯಾಸವು ಜರುಗಿತು. **ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಮೇಲುಕೋಟೆಯ ಅರೆಯರ್ ಶ್ರೀ ಶ್ರೀರಾಮ ಶರ್ಮ** ಅವರು **ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳ ಅಂತಃಸಂಬಂಧ** ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಪ್ರೊ. ಜಯಕುಮಾರ ಉಪಾಧ್ಯೆ ಮತ್ತು ಸಂಸ್ಥೆಯ ಸಿಬ್ಬಂದಿಯವರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ಶ್ರೀಕ್ಷೇತ್ರಕ್ಕೆ ಆಗಮಿಸಿದ ಶ್ರೀ ಶ್ರೀರಾಮಶರ್ಮರವರು ಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.



## ಬೇಕಾಗಿದ್ದಾರೆ

**ಶ್ರುತಕೇವಲಿ ಎಜುಕೇಷನ್ ಟ್ರಸ್ಟ್ (ರಿ) ಸಂಚಾಲಿತ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಬಾಹುಬಲಿ ಮಕ್ಕಳ ಆಸ್ಪತ್ರೆ ಹಾಗೂ ಬಾಹುಬಲಿ ಜನರಲ್ ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ನೀಡಲು ಈ ಕೆಳಕಂಡ ವೈದ್ಯರು, ಆಸ್ಪತ್ರೆ ಮತ್ತು ಕಛೇರಿ ಸಿಬ್ಬಂದಿಯವರ ಅವಶ್ಯಕತೆ ಇರುತ್ತದೆ.**

- ವೈದ್ಯರು–ಫಿಜಿಶಿಯನ್/ ಜನರಲ್ ಮೆಡಿಸಿನ್(ಎಂಬಿಬಿಎಸ್. ಎಂಡಿ.)
- ಗೈನಾಕಾಲಜಿಸ್ಟ್
- ಶಸ್ತ್ರಚಿಕಿತ್ಸಾ ತಜ್ಞರು
- ಮಕ್ಕಳ ತಜ್ಞರು
- ನೇತ್ರ ವೈದ್ಯರು
- ದಂತ ವೈದ್ಯರು
- ತುರ್ತು ವೈದ್ಯಕೀಯ ಅಧಿಕಾರಿ
- ನರ್ಸಿಂಗ್ ಮ್ಯಾನೇಜರ್
- ಸ್ಟಾಫ್ ನರ್ಸ್
- ಸ್ವಾಗತಗಾರರು
- ಫಾರ್ಮಾಸಿಸ್ಟ್
- ಸ್ಟೋರ್ ಕ್ಲರ್ಕ್/ ಮ್ಯಾನೇಜರ್
- ಲ್ಯಾಬ್ ತಂತ್ರಜ್ಞರು
- ಎಕ್ಸ್‌ರೇ ತಂತ್ರಜ್ಞರು
- ರಿಫ್ರಾಕ್ಷನಿಸ್ಟ್
- ಹೌಸ್‌ಕೀಪಿಂಗ್ ಸಹಾಯಕರು
- ಗಾರ್ಡನರ್

ಮೇಲ್ಕಂಡ ವಿಭಾಗಗಳಿಗೆ ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವ–ವಿವರ (Resume / Bio-data), ಸೇವಾ ಅನುಭವದ ಪತ್ರ, ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ದಿನಾಂಕ : 27ನೇ ಸೆಪ್ಟೆಂಬರ್ 2023ರ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು ಅಥವಾ ಕಳುಹಿಸಿಕೊಡುವುದು. ಸೂಕ್ತ ವಿದ್ಯಾರ್ಹತೆ, ಸಂಬಂಧಪಟ್ಟ ವಿಷಯದ, ಸೇವೆಯ ಅನುಭವ ಆಧಾರದ ಮೇಲೆ ಉತ್ತಮ ವೇತನ ನಿಗದಿಪಡಿಸಲಾಗುವುದು. ಅನುಭವಿ ನಿವೃತ್ತರಿಗೂ ಸಹ ಕೆಲವು ಹುದ್ದೆಗೆ ಆದ್ಯತೆ ಇದೆ.

**ಸಂಪರ್ಕ : ಆಡಳಿತಾಧಿಕಾರಿ, ಶ್ರೀ ಬಾಹುಬಲಿ ಆಸ್ಪತ್ರೆ, ಶ್ರೀ ಧವಲತೀರ್ಥಂ, ಹಿರೀಸಾವೆ ರಸ್ತೆ, ಶ್ರವಣಬೆಳಗೊಳ, ಹಾಸನ ಜಿಲ್ಲೆ–573135**
**ದೂರವಾಣಿ : 9148814163**

## ಅಂಬಿಕಾ ಶಾಲೆಗೆ ಶೇ 100ರಷ್ಟು ಫಲಿತಾಂಶ

ಶ್ರವಣಬೆಳಗೊಳ. ಸೆ. 5 : ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಅಂಬಿಕಾ ಆಂಗ್ಲಮಾಧ್ಯಮ ಪ್ರೌಢಶಾಲೆಯು 2023ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಯಲ್ಲಿ ಶೇ. 100ರಷ್ಟು ಫಲಿತಾಂಶ ಪಡೆದ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯವು ಅಭಿನಂದಿಸಿರುತ್ತದೆ.

## ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ



**ಶ್ರವಣಬೆಳಗೊಳ. ಆ. 30** : ಚನ್ನರಾಯಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ 2023ನೇ ಸಾಲಿನ ಹೋಬಳಿ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಶ್ರೀ ಅಂಬಿಕಾ ಆಂಗ್ಲಮಾಧ್ಯಮ ಪ್ರೌಢಶಾಲೆಯ ಈ ಕೆಳಕಂಡ ವಿದ್ಯಾರ್ಥಿಗಳು ಭಾಗವಹಿಸಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಧನುಷ್ : ಉದ್ದಜಿಗಿತ–ಪ್ರಥಮ
ನಿತಿನ್ : ಗುಂಡು ಎಸೆತ–ದ್ವಿತೀಯ
ಕಾರ್ತಿಕ್ : ಜಾವೆಲಿನ್–ದ್ವಿತೀಯ
ನಿತಿನ್, ಆಕಾಶ್, ಕಾರ್ತಿಕ್, ಶ್ರೀಧರ್ : ರಿಲೆ–ದ್ವಿತೀಯ

## ಚಂದಾದಾರರ ಗಮನಕ್ಕೆ

**ಗೊಮ್ಮಟವಾಣಿ ಧಾರ್ಮಿಕ ಪಾಕ್ಷಿಕ ಪತ್ರಿಕೆಯು 1980ರಲ್ಲಿ ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಪ್ರೇರಣೆ ಮತ್ತು ಶುಭಾಶೀರ್ವಾದದಿಂದ ಆರಂಭಗೊಂಡು ಇಷ್ಟು ವರ್ಷಗಳ ಕಾಲ ಸಮಾಜಕ್ಕೆ ಧಾರ್ಮಿಕ ಪ್ರಭಾವನೆ ನೀಡುತ್ತಾ ಬಂದಿದೆ. ಪತ್ರಿಕೆ ಪ್ರಾರಂಭವಾದಾಗಿನಿಂದ ಶ್ರೀ ಎಸ್.ಎನ್. ಅಶೋಕ್‌ಕುಮಾರ್‌ರವರು ಸಂಪಾದಕರಾಗಿ ತುಂಬಾ ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದಿರುತ್ತಾರೆ. ಶ್ರೀಯುತರು ಕೇಂದ್ರ ಸರ್ಕಾರಿ ಕೆಲಸವನ್ನು ಬಿಟ್ಟು ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಯಶಸ್ವಿಯಾಗಿ 1043 ಸಂಚಿಕೆಗಳನ್ನು ಪ್ರಕಟಿಸಿರುತ್ತಾರೆ. ವಯೋಸಹಜವಾಗಿ ಶ್ರೀ ಎಸ್.ಎನ್. ಅಶೋಕ್‌ಕುಮಾರ್‌ರವರು ಸಂಪಾದಕ ಸ್ಥಾನದಿಂದ ನಿವೃತ್ತಿ ಹೊಂದಿರುತ್ತಾರೆ. ಹಿಂದಿನ ಸಂಚಿಕೆಯಿಂದ ಗೊಮ್ಮಟವಾಣಿ ಧಾರ್ಮಿಕ ಪಾಕ್ಷಿಕ ಪತ್ರಿಕೆಯು ವರ್ಣಮುದ್ರಿತ ಪತ್ರಿಕೆಯಾಗಿ ಮಾರ್ಪಾಡಾಗಿದ್ದು ಮುದ್ರಣ ಸಾಮಗ್ರಿಗಳ ಬೆಲೆಯು ಹೆಚ್ಚಾಗಿರುವುದರಿಂದ ಚಂದಾದಾರರ ವಾರ್ಷಿಕ ದರವನ್ನು ರೂ. 200 ರಿಂದ 250–00ಗಳಿಗೆ ಹಾಗೂ ಆಜೀವ ಸದಸ್ಯತ್ವ (15 ವರ್ಷಗಳು) ರೂ. 2,000–00 ರಿಂದ 2,500–00ಗಳಿಗೆ ಹೆಚ್ಚಿಸಿ ಪರಿಷ್ಕರಿಸಲಾಗಿದೆ. ಚಂದಾದಾರರು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ.**

**ಜಾಹಿರಾತು ದರ 1 ಸ್ಕ್ವೇರ್ ಸೆ.ಮೀ.ಗೆ ರೂ.26–00 ನಿಗದಿಪಡಿಸಲಾಗಿದೆ.**

**ಜಾಹಿರಾತು ನೀಡಲು ಇಚ್ಚಿಸುವವರು ದೂರವಾಣಿ ಸಂಖ್ಯೆ : 8660118443 ಸಂಪರ್ಕಿಸುವುದು.**

**ಮುಖ್ಯ ಕಾರ್ಯದರ್ಶಿ, ಎಸ್.ಡಿ.ಜೆ.ಎಂ.ಐ. ಮ್ಯಾನೇಜಿಂಗ್ ಕಮಿಟಿ ಟ್ರಸ್ಟ್ (ರಿ) ಶ್ರೀಕ್ಷೇತ್ರ ಶ್ರವಣಬೆಳಗೊಳ – 573 135. ಹಾಸನ ಜಿಲ್ಲೆ.**

Edited, Printed & Published by : Charukeerthi Bhattaraka Swamiji and Owned by Shri Jain Math, Shravanabelagola-573 135. Printer : Omkar Offset Printers, Bangalore
Email : gommatavani1980@gmail.com Gommatavani Office Contact No. : 8660118443